ಅಧ್ಯಕ್ಷರು :— ಆಯಿತು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮಂಜುನಾಥರವರು ಈಗಾಗಲೇ 50 ನಿಮಿಷಗಳನ್ನು ತೆಗೆದುಕೊಂಡಿದ್ದಾರೆ ಇನ್ನು ಐದು ನಿಮಿಷಗಳಲ್ಲಿ ಅವರು ಭಾಷಣ ಮುಗಿಸಬೇಕು.

BUDGET ESTIMATES FOR 1975—76 GENERAL DISCUSSION

(Debate Continued)

‡ ಶ್ರೀ ಟಿ. ಎಂ. ಮಂಜುನಾಥ್.—ಅಯವ್ಯಯದ ಪತ್ರದಲ್ಲಿ 80 ಪರ್ಸೆಂಟ್ ಏನು ಜನರು ಎರಡು ಹೊತ್ತಿನ ಊಟಕ್ಕೋಸ್ಕರ ಹೋರಾಟ ನಡೆಸತಕ್ಕಂಥ ಜನ ಇದ್ದಾರೆ ಅಂಥವರ ಮೇಲೆ ಶೋಷಣೆ ಮಾಡುವುದಕ್ಕೆ ಹೊರೆಟಂತಿದೆ. ನನ್ನ ಕ್ಷೇತ್ರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ ಇದೇ ಸದನದಲ್ಲಿ ನಮ್ಮ ತಾಲ್ಲೂಕು ಟಿ ಎ. ಪಿ. ಎಂ. ಎಸ್. ಸೊಸೈಟಿಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ ಮಾಜಿ ಅಧ್ಯಕ್ಷರ ಮೇಲೆ ಯಾವ ರೀತಿಯಿಂದಲೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಬೇಕಾದಷ್ಟು ದೂರುಗಳು ಬಂದಿದ್ದಾಗ್ಯೂ ಇಲ್ಲಿಯುವರೆಗೆ ಯಾವ ರೀತಿ ಕ್ರಮ ತೆಗೆದುಕೊಳ್ಳದೆ ಇರುವುದು ನಮ್ಮ ರಾಜ್ಯದ ಆಡಳಿತದ ವೈಖರಿಯನ್ನು ಎತ್ತಿ ತೋರಿಸುತ್ತದೆ ಆದ್ದರಿಂದ ಇದನ್ನು ಗಮನದಲ್ಲಿ ಇಟ್ಟುಕೊಂಡು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಮ್ಮ ತಿಪಟೂರು ಟಿ. ಎ. ಪಿ. ಎಂ. ಎಸ್. ಒಳಗೆ 10 ಅಂಶಗಳ ದುರ್ವ್ಯವಹಾರ ನಡೆದಿದೆಯೆಂದು ಇದನ್ನು ಸೂಪರ್‌ಸೀಡ್ ಮಾಡುತ್ತೇವೆಂದು ಹಿಂದಿನ ಮಂತ್ರಿಗಳು ಈ ಸದನನಲ್ಲಿ ಹೇಳಿಕೆ ಕೊಟ್ಟಿದ್ದರು. ಆದರೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇನ್ನೊಂದು ವಿಚಾರ ಸರ್ಕಾರದ ಗಮನಕ್ಕೆ ತರುವುದೇನೆಂದರೆ ನಮ್ಮ ತಾಲ್ಲೋಕು ತಹಸೀಲ್ದಾರ್ ಬಹಳ ಸ್ವೇಚ್ಛೆಯಾಗಿ ತನ್ನದೇ ಆದ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಬಡವರಿಗೆ ಭೂಮಿಯನ್ನು ಹಂಚುವಾಗ ಬಹಳ ಲಂಚವನ್ನು ತೆಗೆದುಕೊಂಡು ಬಡವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇವರ ಲಂಚದ ಕೆಲಸ ತುಂಬಾ ಆಗುತ್ತಿದೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಒಂದು ಅರ್ಜಿಯನ್ನು ಕೊಟ್ಟೆ ಅದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ್ದು ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನನಗೆ ತಾವು ಪತ್ರ ಬರೆದದ್ದು ತಾವು ಈಗ ಏನು ಈ ಸದನದಲ್ಲಿ ಹೇಳುತ್ತಿದ್ದೀರಿ ಇದರ ಬಗ್ಗೆಯಲ್ಲ. ಚುನಾವಣೆ ಕಾಲಕ್ಕೆ ಹಸ್ತಕ್ಷೇಪ ಮಾಡುತ್ತಿದ್ದರು ಎಂದು. ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ತಾವು ಏನು ಹೇಳುತ್ತಾ ಇರುವುದು ಇದೆ ಅದು ನಮಗೆ ಗೊತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಪದೇ ಪದೇ ಒತ್ತಾಯ ಮಾಡಿ ಕೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕೋಕನಟ್ ಪಿಕ್‌ಅಪ್ ಮಾಡಬೇಕೆಂದು ಹೇಳುತ್ತಲೇ ಇದ್ದೇನೆ, ಅದು ಏತಕ್ಕೆಂದರೆ ಅದರ ಬಗ್ಗೆ ವಿವರವಾಗಿ ಹೇಳಲು ಕಾಲಾವಕಾಶವಿಲ್ಲ. ಆದ್ದರಿಂದ ಕೋಕನಟ್ ಪಿಕ್‌ಅಪ್ ಮಾಡದೇ ಹೋದರೆ 7—8 ವರ್ಷಗಳಿಂದ ಋತುವ್ಯಾನಗಳ ತೊಂದರೆಯಿಂದ ಸರಿಯಾಗಿ ಕಾಲಕಾಲಕ್ಕೆ ಮಳೆ ಇಲ್ಲದೆ ಪ್ರಾಪ್ತವಯಸ್ಸಿನ ಮರಗಳು ಕೆಲವು ಸಾರಿ 20 ವರ್ಷಗಳ ಮರಗಳು ಸಹಿತ ಒಣಗುತ್ತಿರುತ್ತವೆ. ಸ್ವಲ್ಪಮಟ್ಟಿಗಾದರೂ ಮರಗಳು ಪಿಕ್‌ಅಪ್ ಮಾಡಿದರೆ ಅದರಿಂದ ಅವುಗಳಿಗೆ ಬಹಳ ಸಹಾಯವಾಗುತ್ತದೆ. ಇದರ ಬಗ್ಗೆ ಕೂಡಲೇ ತಾವು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರದಿಯಲ್ಲಿ ಮಾರಾಟ ತೆರಿಗೆ ಸುಮಾರು 100 ಕೋಟಿ ರೂಪಾಯಿ ಎಂದು ಇದೆ. ಸುಮಾರು 14 ಕೋಟಿ ರೂಪಾಯಿ ಹೆಚ್ಚುವರಿ ತೆರಿಗೆ ಹಾಕಿದ್ದೀರಿ. ಹೊಸ ತೆರಿಗೆಯನ್ನು ಹಾಕುವಂತಹ ಅವಶ್ಯಕತೆ ಇರಲಿಲ್ಲ. ಅಂಕಿಸಂಖ್ಯೆಗಳನ್ನು ನೋಡಿದರೆ ಈಗ ನಿಜವಾಗಿಯೂ ಮಾರಾಟ ತೆರಿಗೆ ಹೋದ ವರ್ಷ 70 ಕೋಟಿ ರೂಪಾಯಿ ಇದ್ದದ್ದು ಈ ವರ್ಷ 140 ಕೋಟಿ ರೂಪಾಯಿ ಆಗಬೇಕಾಗಿತ್ತು. ಕಾರಣವೇನೆಂದರೆ ಹಿಂದಿನ ವರ್ಷಕ್ಕಿಂತ ದಾರಣೆವಾಸಿಗಳು ಒಂದಕ್ಕೆ ಎರಡರಷ್ಟಾಗಿದೆ. ಸರ್ಕಾರಿ ಅಧಿಕಾರಿಗಳಿಗೆ ನೀವು ಸ್ವಲ್ಪ ಸರಾಗವನ್ನು ಕೊಡಿ ಯಾವ ರೀತಿಯೂದ ಒತ್ತಡವನ್ನು ಹಾಕಬೇಡಿ. ರಾಜ್ಯಕ್ಕೆ ಬರಬೇಕಾದಂಥ ಆದಾಯವನ್ನು ತಪ್ಪಿಸಲು ಸಹಾಯ ಕೋರಬಂದರೆ ಅವರಿಗೆ ದಾಕ್ಷಿಣ್ಯ ತೋರಿಸಬೇಡಿ. ಇವತ್ತಿನ ದಿನ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಕಳ್ಳಸಾಗಾಣಿಕೆದಾರರು ಮತ್ತು ಕಪ್ಪು ಹಣವನ್ನು ಇಟ್ಟುಕೊಂಡಿರುವವರ ಮೇಲೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ನಮ್ಮ ದೇಶಕ್ಕೆ ಇವರಿಂದ ಬಹಳ ಅನ್ಯಾಯವಾಗುತ್ತಿದೆ. ಸಮಾಜದಲ್ಲಿ ಇಂತಹ ದ್ರೋಹಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇನ್ನು ಕೆಲವು ಹಣವಂತರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿಕ್ಕೆ ಬಂದರೆ ಅವರಿಗೆ ಸರ್ಕಾರದಿಂದ ಏನು ಸಹಾಯಗಳನ್ನು ಒದಗಿಸುತ್ತೀರಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ರಾಜ್ಯದ ಕೈಗಾರಿಕಾ ಮಂತ್ರಿಗಳು ತಮ್ಮ ಉಡುಪನ್ನು ಬದಲಾವಣೆ ಮಾಡುತ್ತಾ ಅವರ ಕೈಗಾರಿಕಾ ಕ್ಷೇತ್ರವನ್ನು ಬದಲಾಯಿಸುತ್ತಿದ್ದಾರೆ ?

ಶ್ರೀ ಟಿ. ಎಂ. ಮಂಜುನಾಥ್.—ಅವರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಸ್ವಯಂ ಉದ್ಯೋಗ ಮಾಡತಕ್ಕಂಥ ಜನಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಅಧ್ಯಕ್ಷರ ಮೂಲಕ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ಕೃಷಿಯ ಮೇಲೆ ವರಮಾನ ತೆರಿಗೆಯನ್ನು ಹಾಕಿದರೆ ಕೃಷಿಕರಿಗೆ ಬಹಳ

(ಶ್ರೀ ಟಿ. ಎಂ. ಮಂಜುನಾಥ್)

ತೊಂದರೆಯಾಗುತ್ತದೆ ಅದ್ದರಿಂದ ದಯಮಾಡಿ ಅದನ್ನು ಕೂಡಲೆ ರದ್ದುಮಾಡಿ. ಇನ್ನು ನ್ಯಾಷನಲ್ ಬ್ಯಾಂಕಿನಿಂದ ಹಣವನ್ನು ಕೊಡಿಸುತ್ತೇನೆಂದು ಹೇಳಿ ರೈತರ ಮತ್ತು ಬಡವರ ಮೇಲೆ ಬಡ್ಡಿ ದರವನ್ನು ಜಾಸ್ತಿ ಮಾಡಿದ್ದಾರೆ.

ಈವೊತ್ತು ಈ ಬಡ್ಡಿ ದರವನ್ನು ರೈತ ಕೊಡುವುದಕ್ಕೆ ಸಾಧ್ಯವಿಲ್ಲಾ. ಇಂಥಾ ಒಂದು ಪರಿಸ್ಥಿತಿ ರೈತನಿಗೆ ಇದೆ ಮತ್ತು ಗೊಬ್ಬರವನ್ನು ಹಿಂದೆ ಯಾವ ರೀತಿ ಒಂದು ಸಬ್ಸಿಡೈಸ್ ರೇಟ್‌ನಲ್ಲಿ ರೈತನಿಗೆ ಕೊಡುತ್ತಿದ್ದರೋ ಆ ರೀತಿಯಾಗಿ ಈವೊತ್ತಿನ ದಿವಸ ವಿತರಣೆ ಮಾಡಿಕೊಡಿ. ಈವಾಗ ಗೊಬ್ಬರಕ್ಕೆ ಒಂದಕ್ಕೆರಡ ರಷ್ಟು ಹೆಚ್ಚಿಸಿದ್ದೀರಿ. ಇಷ್ಟು ದುಬಾರಿ ಬೆಲೆ ಕೊಟ್ಟು ಗೊಬ್ಬರವನ್ನು ಆ ರೈತ ತೆಗೆದುಕೊಂಡರೆ ಅವನು ಬೆಳೆದಂಥ ಆಹಾರ ಧಾನ್ಯವನ್ನು ಕಡಿಮೆ ದದರಲ್ಲಿ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಅನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಈಗ ತಾವು ದೇಶದ ಮುಂದೆ ಹಾಕಿರತಕ್ಕಂಥಾ 14 ಕೋಟಿ ರೂಪಾಯಿ ತೆರಿಗೆ ಏನು ಇದೆ ಅದನ್ನು ಕೂಡಲೇ ವಜಾ ಮಾಡಿ. ನೀವು ಹಾಕಿರತಕ್ಕಂಥಾ ತೆರಿಗೆ ಬಹಳ ಹೆಚ್ಚಾಗಿದೆ. ಹಾಗೆ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ನನಗೆ ಒಂದು ತಿಂಗಳು ಮಂತ್ರಿ ಪದವಿ ಕೊಡಿ. ನೀವು ಈಗ ಈ ರೈತನ ಮೇಲೆ 14 ಕೋಟಿ ರೂಪಾಯಿ ತೆರಿಗೆ ಏನು ಹಾಕಿದ್ದೀರೋ ಆ ತೆರಿಗೆ ಹಾಕದೆ ಅದರ ಬದಲು ಅದಕ್ಕಿಂತಲೂ ಹೆಚ್ಚಾಗಿ ಬರುವ 70 ಕೋಟಿ ರೂಪಾಯಿ ಬರುವ ಉಳಿತಾಯ ವನ್ನು ತೋರಿಸಿ ಕೊಡುತ್ತೇನೆ, ಅದಕ್ಕೆ ನನಗೆ ಅವಕಾಶ ಮಾಡಿ ಕೊಡಿ. ನಾನಾ ಬಾಬುಗಳಲ್ಲಿ ಹಣ ಪೋಲಾಗುತ್ತಾ ಇದೆ. ಹೀಗಿರುವಾಗ ಹೆಚ್ಚು ಹೆಚ್ಚು ತೆರಿಗೆಯನ್ನು ಹಾಕುವುದಕ್ಕೆ ಮತ್ತು ರೈತರನ್ನು ಶೋಷಣೆ ಮಾಡತಕ್ಕಂಥ ಈ ಒಂದು ಅಯ ವ್ಯಯವನ್ನು ನಾವು ಯಾವ ರೀತಿ ಒಪ್ಪಬೇಕು? ತಾವಾದರೂ ಹೇಳಿ. ಆದುದರಿಂದ ಅರ್ಥಪರಿಣತರು ಹೆಚ್ಚಿಗೆ ಹಾಕಿರತಕ್ಕಂಥ ಈ ಹೊಸ ತೆರಿಗೆಯನ್ನು ವಾಪಸು ಪಡೆದು ಈಗ ದೇಶದಲ್ಲಿ ಹಾಕಿರತಕ್ಕಂಥ ತೆರಿಗೆಗಳು ಏನು ಇವೆ, ಅನೇಕ ಬಾಬುಗಳಲ್ಲಿ ಏನು ತೆರಿಗೆಗಳನ್ನು ಹಾಕಿದ್ದೀರಿ ಅದನ್ನು ಪೋಲಾಗದೇ ಇರುವ ರೀತಿಯಲ್ಲಿ ವಸೂಲ್ಮಾಡಿದರೆ ನಿಮಗೆ ಎಷ್ಟೋ ಹಣ ಉಳಿತಾಯವಾಗುತ್ತದೆ. ಆ ರೀತಿ ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI DODDA THIMMAIAH (Gulur):—Madam Speaker, while supporting the budget proposals for the year 1975-76, I wish to make certain comments on the financial performance of the current year and the previous year.

It is a known fact that any fiscal policy of any developing country will present more and more difficulties

because of the economic uncertainties which are posed by the inflationary pressures and as the Hon. Finance Minister has put it, our State cannot stand insulated from the sweep of this economic evil. There are two problems: one is resource mobilisation and the other is the impact of economic uncertainties on certain specific targets. What is the target that the Finance Minister has put for the current year. He has put an ambitious development outlay of about Rs. 142 crores for the current year 1975-76. But unfortunately his firm belief that the Centre will finance the Kali Project to the tune of Rs. 21 crores did not materialise. The Central Government has not appreciated the farsight and the enterprise of our State and we really feel sorry that such a project like the Kali Project which can bring about a new meaning and dimension to the economic and industrial fields of our State has been let down on account of the paucity of funds. in spite of all these adverse circumstances Central assistance is not coming forth to the extent envisaged by the Government. Instead it has pegged it at Rs. 3?.46 crores. The massive efforts made by the Government for resource mobilisation are really to be appreciated. In spite of all these adverse circumstances Government has achieved a target of Rs. 144.46 crores as against Rs. 111 crores in the year 1973-74.

Although the Government expected about 21 crores for the Kali Project from the centre, I am glad the Government was able to raise additional resources to the tune of Rs. 28 crores and finance the Kali Project to the tune of Rs. 17 crores for the current year as against Rs. 15 crores in the previous year. The ability of the Finance Minister to raise additional recourses and to keep up the tempo of development and to step up the development programme is really to be appreciated. I am afraid that the Central Government must have realised the ability of the Finance Minister to raise additional resources and therefore he did not get the anticipated funds from the

(Sri Dodda Thimmaiah)

Central Government. I hope his ability and resourcefulness to raise additional resources will not be taken undue advantage of by the Central Government. On the other hand, I hope the Central Government will appreciate the efforts of the Finance Minister to raise additional resources and keep up the tempo of development programmes in our State. The additional resources he raised which stood at Rs. 51 crores in 1974-74 rose to Rs. 99 crores in 1974-75 and he hopes that it will go up to 119.5 crores in 1975-76. It is really a commendable effort of the Government to the keep the financial position of this State in a sound position and we hope in the year 1975-76 during which he hopes to achieve an outlay of Rs. 155 crores Central Government and the Planning Commission will certain assess the needs of our State and try to help us to the maximum extent.

The Finance Minister hopes that he would convince the Government of India that the State would raise funds for the development programmes next year through the commercial banks. In addition, the Finance Minister expects to get a portion of the loan which the Central Government is likely to get from the World Bank or other international agencies for power projects like the Kali Project. I hope his efforts would be successful.

I would request the Hon. the Finance Minister not to forget to agitate for an oil refinery for our State because the attitute of the Central Government is that if you do not agitate in the beginning and if you do not later on agitate for years together for a particular project or scheme, they do not give it. A small State like Kerala is having an oil refinery. There was a proposal before the Central Government. Of course, the Karnataka Government has urged for it but to-day there is no talk about an oil refinery.

When the Finance Minister replies to the debate, I want to know the position regarding Vijayanagar Steel

plant. I want to know whether it has been kept in cold storage or whether the Government has taken any action in the direction of having this big steel plant at Hospet. I think the Hon. Finance Minister is not satisfied with the pelletisation plant. I request him to urge the Central Government to see that the Vijayanagar Steel Plant is taken up and the work is started as early as possible.

3-00 P. M.

Both in the Governor's Address and the Budget Speech there is no mention of the Tourism Department. Although I congragulate the Government for establishing the Directorate of Tourism and Tourism Development Corporation, not a word is mentioned about the tourism in both the Address and the Budget Speech. Tourism, in addition to bringing in foreign exchange it develops national integration and international goodwill. It generates economic activity in our State. Therefore, I appeal to the Government to see that enough funds are made available for this corporation which is doing good work in the State.

I will come to some of the items which relate to the lowest strata of society middleclass and rural folks. In the last year's budget speech the Finance Minister had said that provision made for minor irrigation is more than doubled. I agree with him. I had said last year that the minor irrigation should be given as much importance as major irrigation because it brings about immediate result to the rural folks and there will be more and more economic activity and rural unemployment problem will be solved to some extent. But what has the Finance Minister done this year. He has allotted Rs. $7\frac{1}{2}$ crores for minor irrigation and that includes amount to be spent in the drought stricken areas. What are those drought stricken areas-47 taluks. How much is allotted. It means only $1\frac{1}{2}$ crores will be utilised for minor irrigation I do not think it will be enough for the develop-

(Sri Dodda Thimmaiah)

ment of minor irrigation. I do not think it will be enough for the development of minor irrigation which is a main source for the small farmers and others to be benefitted. I request the Minister to see that this amount allotted for the minor irrigation is enhanced to the extent possible.

ಶ್ರೀ ಎಂ.ವೈ. ಘೋರ್ಪಡೆ.—ಮೈನರ್ ಇರಿಗೇಷನ್ ಬಾಬಿಗಾಗಿ 1973-74 ರಲ್ಲಿ ಡ್ರಾಟ್ ಇರುವ ತಾಲ್ಲೂಕುಗಳಿಗೆ ಏಳು ಕೋಟಿ ರೂಪಾಯಿ ಇದೆ. ಇದರಲ್ಲಿ ಎರಡು ಕೋಟಿ ರೂಪಾಯಿ ಮೈನರ್ ಇರಿಗೇಷನ್‌ಗಾಗಿ ಒಟ್ಟು ಏಳುವರೆ ಕೋಟಿ ರೂಪಾಯಿ ಇರುವುದರಲ್ಲಿ ಕ್ಷಾಮ ಪೀಡಿತ ತಾಲ್ಲೂಕುಗಳು ಎಂದು ಕೆಲವು ಕಡೆ ಒತ್ತಾಯ ಬಂದುದರಿಂದ ಇವಕ್ಕೆ ಆರು ಕೋಟಿ ರೂಪಾಯಿ ಒದಗಿಸಲಾಗಿದೆ. ಒಟ್ಟು ಏಳೂವರೆ ಕೋಟಿ ರೂಪಾಯಿ ಇದೆ. ಇದರಲ್ಲಿ 47 ತಾಲ್ಲೂಕುಗಳು ಬರುತವೆ ಈ ಪೈಕಿ 27 ತಾಲ್ಲೂಕುಗಳಿಗೆ ಸ್ವಲ್ಪ ವಿಶೇಷವಾಗಿ ಗಮನ ಕೊಡಲು ಇದರಲ್ಲಿ ಒದಗಿಸಲಾಗಿದೆ. ಮತ್ತು ಪದೇ ಪದೇ ಇಲ್ಲಿ ಹಾಗೂ ಇತರ ಜನಗಳಿಂದ ಒತ್ತಾಯ ಸರಕಾರಕ್ಕೆ ಬರುತ್ತಿದ್ದುದರಿಂದ ಇಂತಹ ತಾಲ್ಲೂಕುಗಳಿಗೆ ಸ್ವಲ್ಪ ಹೆಚ್ಚು ಸಹಾಯ ಸರಕಾರ ಮಾಡಿದರೆ ಆದರಲ್ಲಿ ಏನೂ ತಪ್ಪು ಕಾಣುವುದಿಲ್ಲ. ಇವೆಲ್ಲ ಬರಗಾಲಕ್ಕೆ ಸೇರಿದ ತಾಲ್ಲೂಕುಗಳು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮೀ, ನನ್ನ ತಾಲ್ಲೂಕಿಗೆ ಮಾನ್ಯ ಮಂತ್ರಿಗಳು ಯಾವಾಗಲಾದರೂ ಬಂದಿದ್ದಾರೆಯೋ ಕ್ಷಾಮ ಪೀಡಿತ ತಾಲ್ಲೂಕುಗಳು ಎಂದು ಪಟ್ಟಿ ಮಾಡುವಾಗ ನಮ್ಮ ಸರಕಾರದ ಕಣ್ಣಿಗೆ ನನ್ನ ತಾಲ್ಲೂಕಾದ ನಾಗಮಂಗಲ ಏಕೆ ದೃಷ್ಟಿಗೆ ಬರಲಿಲ್ಲ ? ನಮ್ಮ ತಾಲ್ಲೂಕಿನ ಪರಿಸ್ಥಿತಿ ಸರಕಾರದ ಅರಿವಿಗೆ ಬರಲಿಲ್ಲವೇ ? ಇಂತಹ ವ್ಯತ್ಯಾಸಗಳನ್ನೇಕೆ ಮಾಡಲು ಹೋಗುತ್ತೀರಿ ? ಬೇಕಾದರೆ ಯಾವ ಮಂತ್ರಿಗಳಾದರೂ ಬಂದು ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ಕಣ್ಣಾರೆ ನೋಡಬಹುದು. ತಾವು ಹೇಳುವಂತೆ ಇಲ್ಲಿ ಕೊಟ್ಟಿರುವ ಯಾವ ಒಂದು ತಾಲ್ಲೂಕಿಗಿಂತಲೂ ನಮ್ಮ ತಾಲ್ಲೂಕು ಉತ್ತಮ ಸ್ಥಿತಿಯಲ್ಲಿದೆ ಎಂದು ತಾವು ಹೇಳಿದರೆ ಆ ದಿನವೇ ನಾನು ಈ ಶಾಸನ ಸಭೆಯ ಸದಸ್ಯತ್ವ ಬಿಟ್ಟು ಹೊರಗೆ ಹೋಗುತ್ತೇನೆ. ಏತಕ್ಕಾಗಿ ಇಂತಹ ವ್ಯತ್ಯಾಸಗಳನ್ನು ಮಾಡಲು ಹೋಗುತ್ತೀರಿ ?

SRI DODDATHIMMIAH.—The Government has taken up certain schemes for the marginal and small farmers and agricultural labourers. I submit to the House that this lower strata of agricultural community is the real

backbone of agriculture and to develop this lower strata of agricultural community and to raise their standard of living, I submit th t the money you are getting from the Centre Rs. 1.5 crores is not enough. The Hon. Minister must see that some funds are made available and secured from the Centre and see that the lowest strata of society come up and their standard of life is improved.

Regarding housing, with all humility I submit that this People's Housing Programme it is good we call it so. But for the scheduled castes and scheduled tribes since the time of Dewan Madhavarao we had a special scheme for these people. Recently we have the Scheduled Castes and Scheduled Tribes Housing Corporation. After the last election in the first year some amount was allotted. Last year not even mention of it was made. This year, I am glad you have mentioned that share amount for the Housing capital will be given to the Corporation. I want to know under this People's Housing programes, how many houses have been built for Scheduled Caste and Scheduled Tribes. You have said that about 20,000 houses are constructed or have been started. I do not know of them how much are for Scheduled Castes and Scheduled Tribes. I only want to impress that, that sufficient amount is provided for houses for Scheduled Caste and Scheduled Tribes under this scheme.

The Finance Minister was kind enough to say during his last Budget speech that *R*s. 24 lakhs have been allotted to the Finance Corporation of the Scheduled Castes and Scheduled Tribes. In the present Budget speech there is no mention about it. Last year's allotment of Rs. 24 lakhs has gone to cold storage. Why should it be mentioned without the Corporation coming into existence and without spending it? This is nothing but eye-wash. How many SC and ST people have been benefited by this? I am extremely sorry to say that this amount of *R*s. 24 lakhs was not spent. The proposal is to raise a capital of *R*e. 1 crore. I request the Government to be

(Sri Dodda Thimmaiah)

serious about the schemes of S. C and S. T. people When the Government are making efforts to establish an egalitarian society, they must give priorities to these schemes which would benefit the have-nots.

Recently, a Leather Board was formed. They took one year to make it a statutory Board; it was called an Advisory Board. But when the Advisory Board make certain recommendations, they get no reply from the Government. Such being the case, how can the Finance Corporations are going to help the poorer sections of the society? Unless particular attention anp special attention is given to these things, I am extremely sorry to say that you can never raise the standard of these poor people. Therefore, I appeal to the Government to always have in view a priority for the schemes which are going to benefit the poor and lower sections of the society.

In the process of development, naturally those who are benefited should contribute to the very thing that sustains them. I welcome the taxation proposals except on some items. I submit with all humility that groundnut oil, coconut oil and other edible oils should be taken out of the purview of taxation. Already the prices of these oils are high and the house-wives are grumbling. Common man is using these every day. Therefore these should be removed from the purview of taxation.

Jaggery is used by poor people. Why do the Government wants to tax jaggery and gunny bags? I request that these two items should also be taken out of the purview of taxation.

By and large our Budget proposals are in the direction of establishment of a socialistic order. Those who

are capable of paying taxes should be taxed, and the Government have rightly taxed the right people in the interest of the poorer sections of the society.

Thank you.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :....ಸನ್ಮಾನ್ಯ ಅಧ್ಯಕ್ಷಣಿಯವರೇ ನಮ್ಮ ರಾಜ್ಯದ ಅರ್ಥ ಸಚಿವರು ಈ ಸಭೆಯಮುಂದೆ ಮಂಡಿಸಿರತಕ್ಕ 1975-76ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಳೆದ ವರ್ಷ ಇದೇ ಸದನದಲ್ಲಿ ಇದೇ ಶ್ರೀಮಾನ್ ಘೋರ್ಪಡೆಯವರು ಇದೇ ರೀತಿ ಒಂದು ಆಯವ್ಯಯ ಪತ್ರವನ್ನು ಮಂಡನೆ ಮಾಡಿದ್ದರು. ಆಗ ರಾಜ್ಯದಲ್ಲಿ ನಾನು ಯಾವಾಗಲೂ ಸುಭಿಕ್ಷವಾಗಿರುವಂತೆ ಮಾಡುತ್ತೇನೆ ಎಂದು ಸ್ವರ್ಗಕ್ಕೆ ಸೋಪಾನವನ್ನು ಹಾಕಿಸುವುದಾಗಿ ಭರವಸೆಯನ್ನು ಕೊಟ್ಟು ಭೂಪರು ಇವರು. ಆದರೆ ನನಗೆ ಆಶ್ಚರ್ಯವಾಗುತ್ತದೆ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಪದವೀಧರರು ಈ ಆಯವ್ಯಯ ಪತ್ರವನ್ನು ಮಾರ್ವಾಡಿ ಲೆಕ್ಕಪತ್ರದಂತೆ ಬರೀ ಅಂಕೆ ಸಂಖ್ಯೆಗಳನ್ನು ತುಂಬಿಸಿ ಇಟ್ಟಿದ್ದಾರೆ. ಈ ಬಡ್ಜೆಟ್ಟು ಮಾರ್ವಾಡಿ ಪುಸ್ತಕವಲ್ಲ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನಮ್ಮ ರಾಜ್ಯದ ಆರ್ಥಿಕ ನೀತಿ ಏನೆಂಬುದನ್ನು ಮೊದಲು ಇದರಲ್ಲಿ ಸ್ಪಷ್ಟ ಪಡಿಸತಕ್ಕ ಕರ್ತವ್ಯ ದೊಡ್ಡದು. ಅದು ಚಿಕ್ಕದಲ್ಲ. ಇವರ ಆರ್ಥಿಕ ನೀತಿಯ ಪರಿಣಾಮವಾಗಿ ಸಾಮಾಜಿಕ ಪರಿವರ್ತನೆ ಏನಾಗುತ್ತದೆ ಎನ್ನುವುದರ ಸೂಚನೆಯನ್ನು ಆಯವ್ಯಯ ಪತ್ರದಲ್ಲಿ ಇಡಬೇಕು. ಅವೆಲ್ಲವನ್ನೂ ಬಿಟ್ಟು ಕೇವಲ ಅಂಕಿ ಸಂಖ್ಯೆಗಳ ಮಾರ್ವಾಡಿ ಲೆಕ್ಕಪತ್ರದ ಒಂದು ನೀತಿ ಪುರಾಣವನ್ನು ಇಟ್ಟಿದ್ದಾರೆ ಎಂದು ನಾನು ವಿಷಾದದಿಂದ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ಆದ್ದರಿಂದ ಹೋದವರ್ಷದಿಂದ ಈ ವರ್ಷದವರೆಗೂ ಒಂದು ವರ್ಷದ ಅವಧಿಯಲ್ಲಿ ಇವೊತ್ತಿನವರೆಗೂ ಆಗಿರತಕ್ಕ ಪರಿಣಾಮ ಏನು; ಪರಿವರ್ತನೆ ಏನಾಗಿದೆ, ಕಳೆದ ವರ್ಷ ಆಯವ್ಯಯ ಪತ್ರವನ್ನು ಮಂಡಿಸಿ ಅವರು ತಮ್ಮ ನೀತಿಯನ್ನು ನಿರೂಪಣೆ ಮಾಡಿದ ನಂತರ ಅದರ ಕಾರ್ಯಕ್ರಮ ಮಾಡಿ ಆದ ಮೇಲೆ ಇವೊತ್ತಿನವರೆಗೂ ರಾಜ್ಯದಲ್ಲಿ ಆ ರತಕ್ಕ ಪರಿವರ್ತನೆ ಏನು ಎನ್ನುವುದನ್ನು ಅವರು ತಿಳಿಸಲಿಲ್ಲ. ಅದರ ಈ ಬಗ್ಗೆ ಅವರು ಹೇಳಬೇಕಾಗಿತ್ತು ಇನ್ನು ಮುಂದಾದರೂ ಈ ಚರ್ಚೆಗೆ ಉತ್ತರ ಕೊಡುವಾಗ ಆ ವಿಷಯವನ್ನು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಗತಿಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಬಹಳ ಪ್ರಗತಿ ಆಗಿದೆ ಎಂದು ಹೇಳಿದ್ದಾರೆ. ಕಾಂಗ್ರೆಸ್ಸಿನವರು 27 ವರ್ಷಗಳ ಹಿಂದೆ ಯಾವೊತ್ತು

(ಶ್ರೀ ಕೋಣಂದೂರು ಲಿಂಗಪ್ಪ)

ಅಧಿಕಾರಕ್ಕೆ ಬಂದರೋ ಅಂದಿನಿಂದ ಇವೊತ್ತಿನವರೆಗೂ ಆಗಿರತಕ್ಕ ಪ್ರಗತಿಯನ್ನು ನೋಡುವುದಾದರೆ ಹೋದ ವರ್ಷ ಬಟ್ಟೆ ಒಬ್ಬನಿಗೆ $13\frac{1}{2}$ ಮೀಟರ್ ಇತ್ತು. ಇವೊತ್ತು ಶ್ರೀಮತಿ ಇಂದಿರಾಗಾಂಧಿಯವರ ಗರೀಬಿ ಹಟಾವೋ ಸರ್ಕಾರದಲ್ಲಿ 1975 ರಲ್ಲಿ $13\frac{1}{2}$ ಮೀಟರಿಂದ 12 ಮೀಟರಿಗೆ ಇಳಿದಿದೆ. ಆಹಾರ 1947 ನೇ ಇಸವಿಯಲ್ಲಿ ಒಬ್ಬನಿಗೆ 175 ಕೆ. ಜಿ. ಇತ್ತು. ಈಗ 150 ಕೆ. ಜಿಗೆ ಇಳಿದಿದೆ. ಅವಿದ್ಯಾವಂತರು 28 ಕೋಟಿ ಇದ್ದರು. ಈಗ ಅದು 38 ಕೋಟಿಗೆ ಏರಿದೆ. ಇವನ್ನು ಜನಸಂಖ್ಯೆಗೆ ಅನುಗುಣವಾಗಿ ವ್ಯವಸ್ಥೆ ಮಾಡಬೇಕು. ಏನು ಅವಶ್ಯಕವಾಗಿ ಮಾಡಬೇಕೋ ಅಷ್ಟನ್ನು ಮೂಲಭೂತವಾಗಿ ಬದಲಾವಣೆಯ ಕೆಲಸವನ್ನು ಮಾಡದೆ ಕೇವಲ ತೇಪೆ ಹಾಕತಕ್ಕಂಥಾ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ, ಈ ರೀತಿ ಅದುಲು ಬದಲು ಹಿಂದು ಮುಂದು ಆಗಿದ್ದರಿಂದ ರೈತರು ವಿಮಂಚನೆಗೆ ಒಳಗಾಗಿದ್ದಾರೆ. ರೈತರಿಗೆ ತೊಂದರೆಯಾಗಿದೆ. ವ್ಯವಸಾಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ರೈತ ಕುಟುಂಬಗಳು 50 ಲಕ್ಷ ಇವೆ ಇದು ಸರ್ಕಾರದ ಲೆಕ್ಕದ ಪ್ರಕಾರ. ಬಹಳ ಶೋಚನೀಯವಾದ ವಿಷಯ ವಿಷಾದದ ವಿಷಯ ಏನೆಂದರೆ ಹಸಿರು ಕ್ರಾಂತಿಯನ್ನು ಮಾಡುತ್ತೇವೆ ಎಂದು ಹೊಸ ಘೋಷಣೆಯ ಹೊಸ ವೇಷದಿಂದ ಅಧಿಕಾರದ ಗದ್ದುಗೆಯಲ್ಲಿ ಕುಳಿತುಕೊಂಡಿರತಕ್ಕ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಇವೊತ್ತು 50 ಲಕ್ಷ ರೈತ ಕುಟುಂಬಗಳಿರತಕ್ಕ ರಾಜ್ಯದಲ್ಲಿ ಕಬ್ಬಿಣದ ನೇಗಿಲು 4½-5 ಲಕ್ಷಕ್ಕಿಂತ ಹೆಚ್ಚು ಇಲ್ಲ. ಆದರ ಈಗ ಇರ್ರಿಗೇಷನ್ ಪಂಪುಗಳು ಒಟ್ಟು ಎರಡು ಲಕ್ಷಕ್ಕಿಂತ ಹೆಚ್ಚು ಇಲ್ಲ. ಹಾಗೇನಾದರೂ ಹೆಚ್ಚಿಗೆ ಇದ್ದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಲಿ. 26 ಸಾವಿರ ಬಾವಿಗಳಿವೆ ಇವೆಯೆಂದು ಹೇಳುವುದನ್ನು ನೋಡಿದರೆ, ನೀರೇ ಇಲ್ಲದಂತಹ ಬಾವಿಗಳನ್ನು ಜನರಿಗೆ ಒದಗಿಸಿದ್ದಾರೆ. ಇದು ಸರಿಯಲ್ಲ. ಸರಿಯಾದ ಬಾವಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸಿ ಇದರ ಪ್ರಮಾಣವನ್ನು ಮೂರು ನಾಲ್ಕರಷ್ಟು ಮಾಡುವ ಕಾಲ ಯಾವಾಗ ಬಂದೀತೆಂಬುದನ್ನು ಸರ್ಕಾರದವರು ಉತ್ತರ ಕೊಡುವಾಗ ಹೇಳಬೇಕು.

(Mr. Deputy Speaker in the Chair)

ಇನ್ನು ಉದ್ದಿಮೆಗಳ ಬಗ್ಗೆ ನಾನು ಹೆಚ್ಚಿಗೆ ಹೇಳದೇ ಇರುವುದು ಬಹಳ ಒಳ್ಳೆಯದೆಂದು ನಾನು ಅಂದುಕೊಂಡಿದ್ದೇನೆ. ಕೈಗಾರೀಕೈಕೀಕರಣ ಕೇವಲ ಬೆಂಗಳೂರು ಮತ್ತು ಬೊಂಬಾಯಿ ಸುತ್ತಮುತ್ತ ಮಾತ್ರ ಆಗುತ್ತಿದೆ. ಅಲ್ಲಿ ಇಂದಿರಾಗಾಂಧಿಯವರ ಮಗನ ಮಾರುತಿ ಕಾರ್ ಕೈಗಾರಿಕೆಗಳು-ಇವೆಲ್ಲಾ ಆಗುತ್ತಿವೆ ಉದ್ದಿಮೆಗಳಿಗಾಗಿ ಸರ್ಕಾರದವರು ಈ ವರ್ಷಕ್ಕೆ 6 ಕೋಟಿ 32 ಲಕ್ಷ ರೂಪಾಯಿ

ಗಳನ್ನು ಇಟ್ಟಿದ್ದಾರೆ ಇದೊಂದು ವಿಪರ್ಯಾಸವೆಂದು ಹೇಳಬೇಕಾಗುತ್ತದೆ. ಏಕೆಂದರೆ 3 ಕೋಟಿ ಜನಸಂಖ್ಯೆ ಇರತಕ್ಕ 179 ತಾಲ್ಲೂಕುಗಳು ಇರತಕ್ಕ ಮತ್ತು 19 ಜಿಲ್ಲೆಗಳು ಇರತಕ್ಕ ಕರ್ನಾಟಕ ರಾಜ್ಯಕ್ಕೆ ಕೇವಲ 6 ಕೋಟಿ 32 ಲಕ್ಷ ರೂಪಾಯಿಗಳನ್ನು ಉದ್ಯಮಗಳ ಪ್ರಗತಿಗೋಸ್ಕರ ಇಟ್ಟಿದ್ದಾರೆ. ಆದರೆ ಇದು ಎಷ್ಟರಮಟ್ಟಿಗೆ ಇದೆಯೆಂದು ಹೋಲಿಸಿ ನೋಡಿದರೆ, ಲೋಕಸಭೆಯಲ್ಲಿರತಕ್ಕ ಲೋಕಸಭಾ ಸದಸ್ಯರುಗಳ ಹಾಗೂ ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಒಂದು ವರ್ಷಕ್ಕೆ 6 ಕೋಟಿ ರೂಪಾಯಿಗಳ ವೆಚ್ಚ ಏನು ಆಗುತ್ತದೋ ಅಷ್ಟನ್ನು ಒಂದು ಲೆಕ್ಕದ ಪ್ರಕಾರ ಅಲ್ಲಿ ಆಗತಕ್ಕ ಖರ್ಚಿಗೆ ಸಮನಾಗಿ ಈ ರಾಜ್ಯದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕೊಡಲಾಗಿಟ್ಟಿದ್ದಾರೆ. ಇದರ ಬಗ್ಗೆ ವಿಚಾರ ಮಾಡಿ ನೋಡಿದರೆ, ಎಲ್ಲಾ ಹುದ್ದೆಗಳನ್ನು ಬೇರೆಯವರಿಗೆ ಕೊಡುತ್ತಿದ್ದಾರೆಯೇ ಹೊರತು ಈ ನೆಲದ ಮಕ್ಕಳಿಗೆ ದೊರೆಯುತ್ತಾ ಇಲ್ಲ. ಕರ್ನಾಟಕದಲ್ಲಿ ಔದ್ಯಮಿಕ ಪ್ರಗತಿಯಾಗುತ್ತಿದೆಯೆಂದು ಹೇಳುತ್ತಾರೆ. ಯಾವ ರೀತಿಯಲ್ಲಿ ಇದು ಆಗುತ್ತಿದೆ, ಯಾವ ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ ಎಂಬುದನ್ನು ನೋಡಿದ್ದೇ ಆದರೆ, ಇಲ್ಲಿನ ಕೈಗಾರಿಕೆಗಳಲ್ಲಿ ಎಲ್ಲ ಹುದ್ದೆಗಳನ್ನೂ ಬೇರೆಯವರಿಗೆ ಕೊಡುವುದೇ ಜಾಸ್ತಿಯಾಗುತ್ತಿದೆ. ಅವೆಲ್ಲವೂ ಈ ದೇಶದಲ್ಲಿ ಹುಟ್ಟಿ ಬೆಳೆದು ನೆಲೆಸಿರುವ ನಮ್ಮ ನಮ್ಮ ಮಕ್ಕಳಿಗೆ ಮಾತ್ರ ದೊರೆಯಬೇಕು. ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದು ಬಂಗಾಳ, ಲಂಡನ್, ರಷ್ಯಾ ದೇಶದ ಜನರಿಗೆ ಕೆಲಸಗಳನ್ನು ಅಲ್ಲಿ ಕೊಡಬೇಕೆಂದಿಲ್ಲ. ಇಲ್ಲಿ ಆರಂಭವಾಗುವ ಕೈಗಾರಿಕೆಗಳಲ್ಲಿ ಇಲ್ಲಿನ ನೆಲದ ಮಕ್ಕಳಿಗೇ ಹುದ್ದೆಯನ್ನು ಕೊಡಬೇಕು. ಈ ಒಂದು ಉದ್ದೇಶವನ್ನೇ ಸರ್ಕಾರ ಮರೆತಿದೆ. ಎಲ್ಲವನ್ನೂ ಈ ಸರ್ಕಾರ ಮರೆಯುತ್ತಿರುವಾಗ ಇದೇನೂ ಅವರಿಗೆ ಹೊಸದಲ್ಲ.

ಇನ್ನು 11 ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಹಿಂದೆ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾಗಿದ್ದರೆ 5 ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ಈಗ 8 ಕೋಟಿ ರೂಪಾಯಿಗಳಷ್ಟು ಖರ್ಚು ಬೀಳುತ್ತದೆ ಆದರಿಂದ ಇಲ್ಲಿ ಎಷ್ಟು ಜನರಿಗೆ ಕೆಲಸ ಸಿಗುತ್ತದೆಂದರೆ, ಕೇವಲ 750 ಜನರು ಕಾರ್ಖಾನೆಯ ಒಳಗೆ ಕೆಲಸ ಮಾಡುವವರು ಆದರೆ ಹೊರಗಡೆ $7\frac{1}{2}$ ಸಾವಿರ ಜನ ರೈತರಿಗೆ ಮಾತ್ರ ಇದರಿಂದ ಉಪಯೋಗವಾಗುತ್ತದೆ. ಆದರೆ ಇದೆ 5 ಕೋಟಿ ರೂಪಾಯಿಗಳನ್ನು 10 ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರೆ ಇದರ ನಾಲ್ಕರಷ್ಟು ಜನರಿಗೆ ಉದ್ಯೋಗಗಳು ಲಭಿಸುತ್ತದೆ ಇನ್ನು ಬೇರೆ ವಿಷಯಗಳನ್ನು ಇಲ್ಲಿ ಹೆಚ್ಚಿಗೆ ಹೇಳಬಯಸುವುದಿಲ್ಲ. ಒಟ್ಟಿನಲ್ಲಿ ಈ ಸರ್ಕಾರದ ಮತ್ತು ಕೇಂದ್ರ ಸರಕಾರದ ಬಾಂಧವ್ಯದ ಬಗ್ಗೆ ಹೆಚ್ಚು ಹೇಳದೆ ಸರ್ವಜ್ಞರು ಹೇಳಿದ ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಅಷ್ಟು ಹೇಳಿದರೆ ಸಾಕೆಂದು ನನಗನ್ನಿಸುತ್ತದೆ. ಪ್ರತಿಯೊಂದಕ್ಕೂ ನಮ್ಮ

(ಶ್ರೀ ಕೋಣಂದೂರು ಲಿಂಗಪ್ಪ)

ಸರ್ಕಾರದವರು ಶ್ರೀಮತಿ ಇಂದಿರಾ ಗಾಂಧಿಯವರನ್ನೇ ಕರೆಯುವುದಾಗಿದೆ. ಅವರು ವಿಜಯನಗರ ಉಕ್ಕಿನ ಕಾರ್ಖಾನೆಯ ಶಂಕುಸ್ಥಾಪನೆ ಮಾಡಿದರು. ಆದರೆ ನಮ್ಮ ರಾಜ್ಯದ ಯಾವುದೇ ಪ್ರಗತಿಗೆ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಬೆಂಬಲ ಕೊಡುತ್ತಾ ಇಲ್ಲ. ಕೇಂದ್ರದಲ್ಲಿ ಅಧಿಕಾರ ಗದ್ದುಗೆಯಲ್ಲಿ ಕೂತಿರತಕ್ಕ ಶ್ರೀಮಂತ ವರಿಷ್ಠರಿಗೆ ಹಾಗೂ ಇಲ್ಲಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಾಕಷ್ಟು ಮುಂದಾಲೋಚನೆ ಇಲ್ಲವಲ್ಲಾ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾವು ಒಂದು ರೀತಿಯಲ್ಲಿ ನಪುಂಸಕ ಸರ್ಕಾರವನ್ನು ಹೊಂದಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ನಾವು ಅಕ್ಕಪಕ್ಕದ ರಾಜ್ಯ ಸರ್ಕಾರಗಳನ್ನು ನೋಡಿದರೆ ಅವರವರ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದಿಂದ ಪ್ರತಿಯೊಂದು ಯೋಜನೆಗಾಗಿ ಹಣ ಸಹಾಯವನ್ನು ಪಡೆಯುತ್ತಿದ್ದಾರೆಂಬುದನ್ನು ಕಾಣಬಹುದು. ನಮ್ಮ ಸರ್ಕಾರದವರು ಅಲ್ಲಿ ಹೋಗಿ ನಮ್ಮ ಪ್ರತಿಯೊಂದು ಯೋಜನೆಗೂ ಸಾಕಷ್ಟು ಹಣವನ್ನು ತರುವುದಕ್ಕೆ ಸಂಪೂರ್ಣವಾಗಿ ಅಸಮರ್ಥರಾಗಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಇವರು ಬಾಜಾ ಭಜಂತ್ರಿ ಜನರೆನ್ನಬಹುದು. ಇವರಲ್ಲಿ ಸರಿಯಾಗಿ ಲಾ ಅಂಡ್ ಆರ್ಡರ್ ಏನಾದರೂ ಇದೆಯೇ ಎಂದರೆ ಅದೂ ಇಲ್ಲ. ಇವರಲ್ಲಿ ಏನಾದರೂ ಒಂದು ಕೆಲಸ ಮಾಡಿ ಹೆಚ್ಚಿನ ಅರ್ಹತೆ ಪಡೆದಿದ್ದಾರೆಯೇ ಅಂದರೆ ಅದೇನೂ ಇಲ್ಲ. ಅದರ ಬದಲು ಸರಿಯಾಗಿ ವಾಚ್‌ಮೆನ್ ಕೆಲಸವನ್ನಾದರೂ ಸರಿಯಾಗಿ ಮಾಡಿದ್ದಾರೆ ಎಂದರೆ ಅದೂ ಇಲ್ಲ. ನಾನು ಒಂದು ವೇಳೆ ಮೇಸ್ಟ್ರು ಆಗಿದ್ದರೆ, ಇವರಿಗೆ ನೂರಕ್ಕೆ ಮೂರು ನಂಬರ್ ಕೊಡುತ್ತಿದ್ದೆ. ಬೇರೆಯವರು ಬೇಕಾದರೆ ಇವರಿಗೆ 6 ನಂಬರ್ ಕೊಡುತ್ತಿದ್ದರೋ ಏನೋ? ನಾನು ಮಾತ್ರ ನೂರಕ್ಕೆ ಮೂರು ನಂಬರ್ ಕೊಡುತ್ತಿದ್ದೆ. ಪ್ರಧಾನ ಮಂತ್ರಿಗಳನ್ನು ಬೆಂಚಿನ ಮೇಲೆ ನಿಲ್ಲಿಸುತ್ತಿದ್ದೆ. ನಮ್ಮ ಹೋಂ ಮಿನಿಸ್ಟರ್ ಆಗಿರುವ ಮಾನ್ಯ ಮುಖ್ಯ ಮಂತ್ರಿಗಳನ್ನು ಎರಡು ಕೈಯಲ್ಲಿ ಕಿವಿ ಹಿಡಿದುಕೊಂಡು ಬಗ್ಗಿಸಿ ನಿಲ್ಲಿಸುತ್ತಿದ್ದೆ. ಏಕೆಂದರೆ ಈ ರಾಜ್ಯದ ಆಸ್ತಿಪಾಸ್ತಿಯನ್ನು ಸುರಕ್ಷಿತವಾಗಿ ರಕ್ಷಣೆ ಮಾಡುವ ಶಕ್ತಿ ಈ ಸರ್ಕಾರಕ್ಕೆ ಇಲ್ಲವೆಂದು ಹೇಳಬಹುದು. ಉದಾಹರಣೆಗೆ ಹೇಳುವುದಾದರೆ, ಮೈಸೂರು ಅರಮನೆಗೆ ಸಂಬಂಧಪಟ್ಟ ಆಸ್ತಿ ವಿಷಯ. ಮಾನ್ಯ ಅಧ್ಯಕ್ಷರೇ ಮೈಸೂರು ಅರಮನೆಯ ಆಸ್ತಿ ವಿಚಾರ ತಮಗೆ ಚೆನ್ನಾಗಿ ಗೊತ್ತಿದೆ. ದಿವಂಗತ ಶ್ರೀ ಜಯಚಾಮರಾಜ ಒಡೆಯರ್ ಅವರ ಬಗ್ಗೆ ಹೇಳುವುದಾದರೆ, ಅವರು ವೈಯುಕ್ತಿಕವಾಗಿ ದೊಡ್ಡ ಸಂಗೀತ ವಿದ್ಯಾವಂತರು. ಸಂಗೀತಗಾರರಿಗೆ ತುಂಬಾ ಆಶ್ರಯದಾತರಾಗಿದ್ದವರು. ಈ ರಾಜ್ಯದಲ್ಲಿರತಕ್ಕ ಅವರ ಎರಡು ಅರಮನೆಗಳು, ಅವರ ಆಸ್ತಿಪಾಸ್ತಿ ಸಂಪೂರ್ಣವಾಗಿ ಈ ರಾಜ್ಯಕ್ಕೆ ಸಂಬಂಧಪಟ್ಟದ್ದು. ಅದು ಈ ರಾಜ್ಯದ ಜನತೆಯ ಆಸ್ತಿ. ಅದು ಯಾರೊಬ್ಬರ ವೈಯುಕ್ತಿಕ ಆಸ್ತಿಯಲ್ಲ. ಅಂತಹ ಆಸ್ತಿ ಪರಭಾರೆಯಾಗುವಾಗ, ಈ ರಾಜ್ಯದ

ಗಡಿಯನ್ನು ದಾಟಿ ಹೋಗುವಾಗ, ಅದರ ರಕ್ಷಣೆ ಮಾಡದೇ ಇರತಕ್ಕ ಈ ಸರ್ಕಾರ ಅಧಿಕಾರ ಗದ್ದುಗೆಯಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯರೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಅವು ನಮ್ಮ ರಾಜ್ಯದ ಗಡಿಯನ್ನು ದಾಟಿ, ಭಾರತ ದೇಶದ ಗಡಿಯನ್ನೂ ದಾಟಿ, ಸಮುದ್ರದ ಅಚೆ ಹೋಗಿ ಮಾರಾಟ ಮಾಡುವುದೆಂದರೇನು? ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ನಮ್ಮ ರಾಜ್ಯದ ಮುಖ್ಯ ಮಂತ್ರಿಯವರು—ಇವರಿಬ್ಬರೂ ಕೂಡ ಈ ರಾಜ್ಯದ ಆಸ್ತಿಯನ್ನು ಯಾವ ರೀತಿಯಾಗಿ ರಕ್ಷಣೆ ಮಾಡಬೇಕೆಂಬ ಬಗ್ಗೆ ಸರಿಯಾದ ಕಾರ್ಯ ದಕ್ಷತೆಯನ್ನು ಹೊಂದಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ವೈಯುಕ್ತಿಕವಾಗಿ ಹೇಳುವುದಾದರೆ, ದಿವಂಗತ ಶ್ರೀ ಜಯಚಾಮರಾಜ ಒಡೆಯರ್ ಅವರ ಮೈಸೂರು ರಾಜ್ಯದ ಆಸ್ತಿ ಪಾಲ್ಯ ತಮಗೆ ಚೆನ್ನಾಗಿ ಗೊತ್ತಿದೆ. ವಜ್ರ, ವೈಡೂರ್ಯಗಳಿಂದ ತುಂಬಿ ಶೋಭಿಸುತ್ತಿದ್ದ, ಅವರೇ ದಸರಾ ಮುಂತಾದ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದಂಥ ಇತಿಹಾಸ ಚಾರಿತ್ರಿಕ ಅಂಶವಾಗಿದ್ದಂಥ ಅನೇಕ ವಸ್ತುಗಳು, ಸಿಂಹಾಸನದ ಹೆಚ್ಚು ಬೆಲೆ ಬಾಳುವಂಥ ವಸ್ತುಗಳು ಇವೆಲ್ಲವೂ ಹೊರದೇಶಕ್ಕೆ ಹೋಗಿ ಅಲ್ಲಿ ಅವು ಮಾರಾಟವಾಗುವುದೆಂದರೆ ಏನು? ಅಲ್ಲಿ ಇವುಗಳ ಮಾರಾಟವೇ ಅಲ್ಲ. ಮೈಸೂರು ರಾಜ್ಯದ ಕರ್ನಾಟಕದ ಕೀರ್ತಿ, ಗೌರವ, ಸಂಸ್ಕೃತಿ ಇವುಗಳ ಹರಾಜು ಆಸ್ಟ್ರೇಲಿಯಾದಲ್ಲಿ ಆಗಿದೆ. ಅದಕ್ಕೆ ಬೇಕಾದಂಥ ಸಾಕ್ಷಿ, ಪುರಾವೆಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಹೆಚ್. ಡಿ ದೇವೇಗೌಡ:—ಫೋಟೋ, ಪುರಾವೆಗಳನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡಿ.

ಶ್ರೀ ಕೋಣಂದೂರು ಲಿಂಗಪ್ಪ:—ಆಸ್ಟ್ರೇಲಿಯಾದಲ್ಲಿ ನಮ್ಮ ರಾಜ್ಯದ ಸಿಂಹಾಸನದ ಹಾಗೂ ಮೈಸೂರು ಅರಮನೆಗೆ ಸಂಬಂಧಪಟ್ಟ ವಜ್ರ ವೈಡೂರ್ಯ, ರತ್ನಖಚಿತವಾದಂಥ ಆಭರಣಗಳು ಆಸ್ಟ್ರೇಲಿಯಾದಲ್ಲಿ ಹರಾಜಾಗಿವೆ ನಮ್ಮ ರಾಜ್ಯದ ಸಂಸ್ಕೃತಿಯ ಒಂದು ಅಂಶವನ್ನು ಪರರಾಷ್ಟ್ರದಲ್ಲಿ ಅದರಲ್ಲಿಯೂ ಆಸ್ಟ್ರೇಲಿಯಾದಲ್ಲಿ ಹರಾಜು ಆಗುವಾಗ, ಅವನ್ನು ಅಲ್ಲಿಯೇ ಮಾರಾಟ ಮಾಡುತ್ತಿರುವಾಗ ಈ ಸರ್ಕಾರವನ್ನು ಅಧಿಕಾರ ಗದ್ದುಗೆಗೆ ಬಿಡಬೇಕೇ ಎಂಬುದನ್ನು ಈ ರಾಜ್ಯದ ಜನರು ವಿಚಾರ ಮಾಡಬೇಕು. ಈ ರೀತಿಯಾಗಿ ಯಾರು ಮಾರಾಟ ಮಾಡಿದ್ದಾರೆ. ಇದಕ್ಕೆ ಯಾರು ಪಾತ್ರಧಾರಿಗಳು ಎಂಬುದು ನನಗೆ ಗೊತ್ತಿಲ್ಲ. ದಿವಂಗತ ಶ್ರೀಮನ್ಮಹಾರಾಜರವರ ಅಕ್ಕಪಕ್ಕದ ಜನರೇ ಅವನ್ನೆಲ್ಲಾ ಲಪಟಾಯಿಸಿರಬಹುದು. ಇದಕ್ಕೆ ಸಹಾಯ ಮಾಡಿದಂತಹ ಇಲ್ಲಿಯವರು ಮತ್ತು ಅಲ್ಲಿಯವರು ಎಲ್ಲರೂ ಸೇರಿ ಕೋಟ್ಯಾಂತರ ರೂಪಾಯಿಗಳನ್ನು ಲೂಟ ಮಾಡಿರಬಹುದು ಸರ್ಕಾರದ ಸಹಾಯವಿಲ್ಲದೆ ನಮ್ಮ ರಾಜ್ಯದ ಗಡಿಯನ್ನು 40 ಲಾರಿಗಳಷ್ಟು ಸಾಮಾನುಗಳು ದಾಟಿ ಹೋಗುವುದಕ್ಕೆ ಸಾಧ್ಯವಿಲ್ಲ. ಹಾಗೆ ಹೋಗಬೇಕಾದರೆ

(ಶ್ರೀ ಕೋಣಂದೂರು ಲಿಂಗಪ್ಪ)

ಕೇಂದ್ರ ಸರಕಾರದ ಅನುಮತಿ ಇಲ್ಲದೇ ಭಾರತ ದೇಶದ ಗಡಿಯಾಚೆ ಹೋಗುವುದಕ್ಕೆ ಸಾಧ್ಯವಿಲ್ಲ. ತಮಗೆ ಬೇಕಾದರೆ ಅಲ್ಲಿನ ಭಾವಚಿತ್ರಗಳನ್ನೂ ಸಹ ಕಳುಹಿಸುತ್ತೇನೆ. ಅವನ್ನು ತಮಗೆ ಕಳುಹಿಸುತ್ತಿದ್ದೇನೆ. ತೆಗೆದುಕೊಳ್ಳಬೇಕು.

3-30 P. M.

MR. DEPUTY SPEAKER :—I want to help the Hon. Member. He must tell us who has transpor ed, the day of transport the means of transport and who has purchased. ಈ ವಿವರಗಳು ಒಂದೂ ಇಲ್ಲದೆ ಸುಮ್ಮನೆ ನಾನು ಆ ನಿಮ್ಮ ಫೋಟೋಗಳನ್ನು ತೆಗೆದುಕೊಂಡು ಏನು ಮಾಡಲಿ ?

ಶ್ರೀ ಕೋಣಂದೂರು ಲಿಂಗಪ್ಪ :—ಈಗ ನಾನು ಹೇಳತಕ್ಕ ವಿಷಯದಲ್ಲಿ ತಮಗೆ ಅಗತ್ಯವಾಗಿ ಬೇಕಾದ ವಿವರಗಳೆಲ್ಲಾ ನನ್ನಲ್ಲಿವೆ, ಅವುಗಳನ್ನು ನಾನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ನಾನು ಹೇಳುತ್ತಿರುವ ವಿಚಾರ 'ಆಸ್ಟ್ರೇಲಿಯನ ಪೋಸ್ಟ್'' ಎಂಬ ಪತ್ರಿಕೆಯಲ್ಲಿ 1974ನೇ ಫೆಬ್ರವರಿ 21ನೇ ತಾರೀಖಿನಲ್ಲಿ ಪ್ರಕಟವಾಗಿದೆ. ಅದನ್ನು ತಮಗೆ ಓದಿ ಹೇಳುತ್ತಿದ್ದೇನೆ :

"Look, how long have you been putting off purchasing a howdah of your very own? Just the thing for a right royal ride on your pet elephant, and a spot of tiger hunting around your friendly neighbourhood.

The Jones's next door would be beside themselves with envy to witness the spectacle of Rajah Smith riding majestically on a silver studded 'saddle'. And you could really top it all off by wearing a Superb Turban. OK. Perhaps you are not ready for that yet, so ... ." ಹೀಗೆ ನೂರಾರು ಐಟಂಗಳಿರುತ್ತೆ. ಎಲ್ಲವನ್ನೂ ಓದುತ್ತೇನೆ. ಸಾವಧಾನದಿಂದ ಸದಸ್ಯರು ಕೇಳಬೇಕು. ಹೇಗೆ ನಮ್ಮ ದೇಶದ ಸಂಸ್ಕೃತಿಯನ್ನು ಹಾಳು ಮಾಡಿದ್ದಾರೆ ನೋಡಿ........

ಉಪಾಧ್ಯಕ್ಷರು : - ತಾವು ಈಗಾಗಲೇ ಏನು ಓದುತ್ತಿದ್ದರಿ ಅದರ....

ಶ್ರೀ ಕೋಣಂದೂರು ಲಿಂಗಪ್ಪ :—ನನ್ನಲ್ಲಿ ಫೋಟೋ ಸ್ಟ್ಯಾಟ್ ಬರವಣಿಗೆ, ಚಿತ್ರಗಳು ಎಲ್ಲ ಇರುತ್ತವೆ. ಇಲ್ಲಿ ಸಣ್ಣ ಅಕ್ಷರದಲ್ಲಿರುವ ಬರವಣಿಗೆಯನ್ನು ನಾನು ದೊಡ್ಡ ಅಕ್ಷರದಲ್ಲಿ ಪ್ರಿಂಟ್ ಮಾಡಿಸಿದ್ದೇನೆ

MR. DEPUTY SPEAKER :—Will the Hon. Member give that particular information to the chair ? The date of transport, the man who has transported, the means of transport and who has purchased may be given.

ಶ್ರೀ ಎಸ್. ಎಂ ಕೃಷ್ಣ :—ಮಾನ್ಯ ಸದಸ್ಯರು ಓದುತ್ತಿರುವುದು ಒಂದು ಅಡ್ವರ್‌ಟೈಜ್‌ಮೆಂಟ್ — ಅದು ಸಾಮಾನ್ಯವಾಗಿ 3—4 ಪುಟಗಳಿದ್ದೇ ಇರುತ್ತದೆ....

ಶ್ರೀ ಕೋಣಂದೂರು ಲಿಂಗಪ್ಪ :—ಓಹೋ! ಈ ಮಾನ್ಯ ಸಚಿವರಿಗೂ ಇದರಲ್ಲಿ ಸಂಬಂಧ ಇದೆಯೆಂದಾಯಿತು, ಇರಲಿ. ಇಲ್ಲಿ ಹೀಗೆ ಹೇಳಿರುತ್ತೆ :—

''As the advertising man says 'All this can be yours....' and if you are in the market for some of the wonders and luxuries that was old India of the raj in the grand days of yestered/years, don't miss the most exotic auction Australia has seen, or likely to see.

Hundreds of times, the one-time treasures of the former Maharajah of Mysore go under the hammer on Friday (February 22) at Melbourne's Malvern Town Hall, and for the two youngmen who made it possible it will be the culmination of an incredible bargaining' coup that provoked the Indian Government to 'give them curry' for a long time.

Twenty-eight year old *E*d Clark an antique dealer of Armadale (Melb) and old colleague, Jim Elder, of Adelaide decided to make a 'hit and run' visit to India last year in the quest for off-beat treasures that might have a market in Australia.

They get a 'tip' that a visit to the palace of the former Maharaja of *M*ysore, now the property of the State Trust, might pay dividends in 'odds and ends' but never in their wildest dreams did they visualise that the doorway to veritable Alladdin's cave would be thrown open to them.

(SRI KONANDUR LINGAPPA)

The once fabulously rich old Raj, it seems, although not impoverished, was in the market for some extra rupees he had ruled the State of Mysore untill India became Republic in 1947—and when Ed made an offer for seventeen coaches and carriages and 38 Chandeliers which had hung in the Royal ballroom, the old potentate accepted."

SRI S. M. KRISHNA :—This is some sort of a publication.

SRI KONANDOOR LINGAPPA :—You please hear me completely.

"I made out a cheque immediately Ed told us as he worked in a warehouse in Melbourne one day last week, preparing some of the contents for the big auction. 'And then he took us on a grand tour of the Palace, and every now and than he'd point at something and say we could have that if we wished.

He pointed at objects like a solid marble chess table with inlaid gemstones, 40--odd matching chairs from the banquet room, silverware used by Kings and Queens and heads of State; the carriage that Queen Victoria once rode in (built to Order in France in 1880) polo horse equipment racing and hunting saddless, boots, and oddly enough, a couple of beefeather Uniforms.

In all Ed and Jim bought more than 500 separate items in a spending spree that made them wonder if they were heading for bankruptcy. But they felt this was one gamble that, with luck, would pay off and they brought everything offered."

ಉಪಾಧ್ಯಕ್ಷರು :— ಮಾನ್ಯ ಸದಸ್ಯರು ಓದುತ್ತಿರುವುದನ್ನು ನನಗೆ ಕಳುಹಿಸಿ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ :- ಯಾರಿಗಾದರೂ ಈ ಕರ್ಣಾಟಕದ ಬಗ್ಗೆ, ನಮ್ಮ ರಾಜ್ಯದ ಬಗ್ಗೆ, ನಮ್ಮ ಸಂಸ್ಕೃತಿಯ ಬಗ್ಗೆ ಒಂದು ಅಭಿಮಾನ ಹಾಗೂ ಕಳಕಳಿಯಿದ್ದರೆ, ಪ್ರಜ್ಞೆ ಇದ್ದರೆ ಅವರ ಹೃದಯ ತಲ್ಲಣಿಸದಿರದು. ಇವುಗಳನ್ನು ಮಾರಾಟ ಮಾಡಿದ್ದರಿಂದ ನಮ್ಮ ನಾಡಿನ ಮಾನ ಮರ್ಯಾದೆಗಳನ್ನು ಹರಾಜ್ ಮಾಡಿದಂತಾಗಿದೆ.

ಶ್ರೀ ಎಸ್, ಎಂ. ಕೃಷ್ಣ : ಮಾನ್ಯ ಸದಸ್ಯರು ಓದಿದ ವಿಷಯ ಯ್ಯಾರಿಗೆ ಸೇರಿದ್ದು ? ಅದೇನು ಆ ಸ್ವತ್ತುಗಳೆಲ್ಲಾ ಮಹಾರಾಜರ ಸ್ವಂತದ್ದೇ ಅಥವಾ ಅವುಗಳು ಮೈಸೂರು ಅರಮನೆಗೆ ಸೇರಿದ್ದೇ ನಮ್ಮ ಮಹಾರಾಜರಿಗೆ ಮೈಸೂರಿ ನಲ್ಲಿ ಒಂದು ಅರಮನೆ, ಬೆಂಗಳೂರಿನಲ್ಲಿ ಒಂದು ಅರಮನೆ, ಮತ್ತು ಊಟಿಯಲ್ಲಿ ಒಂದು ಅರಮನೆ ಹೀಗೆ ಅನೇಕ ಅರಮನೆಗಳಿದ್ದುವು. ಅವು ಅವರ ಸ್ವಂತ ಆಸ್ತಿ ಯಾಗಿದ್ದು ಅದನ್ನ ಮಾರಾಟ ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರು ಅನು ಮತಿಯನ್ನು ಕೊಟ್ಟಿರಬಹುದು ತಮಗೆಲ್ಲಾ ಗೊತ್ತಿರುವಂತೆ ನಮ್ಮ ಹಿಂದಿನ ಮಹಾರಾಜರು ಅನೇಕಾವರ್ತಿ ವಿಶ್ವಪರ್ಯಾಟನೆ ಮಾಡಿದ್ದಾರೆ. ಅವರು ಯಾವ ಸಮಯದಲ್ಲಿ ಇವುಗಳನ್ನೆಲ್ಲಾ ಮಾರಾಟ ಮಾಡಿದರು ಎಂಬ....

ಶ್ರೀ ಕೋಣಂದೂರು ಲಿಂಗಪ್ಪ :—ನನಗೆ ನಮ್ಮ ದಿವಂಗತ ಮಹಾರಾಜರ ಬಗ್ಗೆ ಅಪಾರ ಗೌರವವಿದೆ. ಈ ಸಾಮಾನಗಳೆಲ್ಲಾ ಅಲ್ಲಿ ಹರಾಜಾದ್ದು 1974 ರಲ್ಲಿ, ಂದರೆ ಈ ಸಾಮಾನುಗಳೆಲ್ಲಾ ಅದಕ್ಕೂ ಹಿಂದೆಯೇ ಸಾಗಿ ಅಲ್ಲಿಗೆ ಹೋಗಿರ ೇಕು. ಆ ವೇಳೆಗಾಗಲೇ ಇಲ್ಲಿ ಇಂದು ಆಡಳಿತವನ್ನು ನಡೆಸುತ್ತಿರುವ ಸರ್ಕಾರ ಆಸ್ತಿತ್ವಕ್ಕೆ ಬಂದಿತು. ಅಲ್ಲಿ ಕೇಂದ್ರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವೂ ಅಸ್ತಿತ್ವಕ್ಕೆ ಬಂದಿತ್ತು. ಆದರೆ ನಾನು ಹೇಳುತ್ತಿರುವುದಿಷ್ಟೆ :— ನಮ್ಮ ಮಹಾರಾಜರು ದಿವಂಗತರಾಗಿರಲಿ ಅಥವಾ ಅಸ್ತಂಗತರಾಗಿರಲಿ ಇಲ್ಲವೇ ಜೀವಂತರೇ ಆಗಿರಲಿ....

ಶ್ರೀ ಹೆಚ್. ಎನ್. ನಂಜೇಗೌಡ :—ಮಾನ್ಯ ಸದಸ್ಯರು ಈ ದಾಖಲೆ ಗಳನ್ನೆಲ್ಲಾ ಆಸ್ಟ್ರೇಲಿಯಾ ಸರ್ಕಾರದ ಮುಖಾಂತರ ತರಿಸಿಕೊಂಡರೇ ಅಥವಾ ನಮ್ಮ ಸರ್ಕಾರದ ಮೂಲಕ ತರಿಸಿಕೊಂಡರೇ ಹೇಗೆ ? ಫೋಟೋ ಸ್ಟ್ಯಾಟ್ ಕಾಪಿಗಳನ್ನು ಮಾಡುವುದಕ್ಕೆ ಅನೇಕ ಮಾರ್ಗಗಳಿವೆ. ಇಲ್ಲಿ ಮಾನ್ಯ ಸದಸ್ಯರು ಕೆಲವು ಭಾಗ ಅರ್ಥವಾಗುವ ಹಾಗೂ ಇನ್ನು ಕೆಲವು ಭಾಗಗಳು ಅರ್ಥವಾಗದ ಹಾಗೂ ಓದಿದ್ದಾರೆ. ಅದರಿಂದ ನಾವು ಏನು ತಿಳಿದುಕೊಳ್ಳಬೇಕು ?

ಶ್ರೀ ಕೋಣಂದೂರು ಲಿಂಗಪ್ಪ :—ನಾನಾಗಲೇ ಹೇಳಿದಂತೆ ಈ ಎಲ್ಲಾ ವಿಚಾರಗಳೂ ಸಂಪೂರ್ಣವಾಗಿ 'ಆಸ್ಟ್ರೇಲಿಯನ್ ಪೋಸ್ಟ್'

(ಶ್ರೀ ಕೋಣಂದೂರು ಲಿಂಗಪ್ಪ)

ಎಂಬ ಪತ್ರಿಕೆಯ ಪುಟ—16, 17, 18, ಇವುಗಳಲ್ಲಿ ತಾ : 21—2—1974 ರಂದು ಪ್ರಕಟವಾಗಿದೆ. ಇನ್ನೂ ಸವಿಸ್ತಾರವಾಗಿ ಹೇಳುತ್ತೇನೆ ಕೇಳಿ. ಆದರೆ ಇದರ ಬಗ್ಗೆ ಸಂಪೂರ್ಣ ವಿವರವನ್ನು ಈಗ ಹೇಳುವುದಕ್ಕೆ ಅವಕಾಶವಿಲ್ಲ. ಈ ರೀತಿ ನಮ್ಮ ನಾಡಿನ ಸಂಸ್ಕೃತಿಯ, ಚರಿತ್ರೆಯ ಹಿರಿಮೆಯನ್ನು ಪ್ರತೀಕವನ್ನು ಪರರಾಷ್ಟ್ರಗಳಲ್ಲಿ ಹರಾಜು ಹಾಕುವುದು ನಮ್ಮ ರಾಷ್ಟ್ರದ ಮಾನಮರ್ಯಾದೆಯನ್ನು ಹರಾಜು ಹಾಕಲು ಅವಕಾಶ ಮಾಡುವುದು ಇದಕ್ಕೆ ಈಗಿನ ಸರಕಾರ ಹೊಣೆಯಾಗಿದೆ. ಇದರ ಬಗ್ಗೆ ನಾಡಿನ ಜನ ಎಂಥ ಅಭಿಮಾನ ಇಟ್ಟುಕೊಳ್ಳಬೇಕು, ಅದನ್ನು ಎಷ್ಟು ದೂರದಲ್ಲಿ ನಿಲ್ಲಿಸಬೇಕು ಎಂದು ನಿರ್ಧಾರ ಮಾಡಬೇಕು. ಇದರ ಬಗ್ಗೆ ಹಿಂದುಮುಂದು ನೋಡದೆ ಈ ಎಲ್ಲ ವಿಚಾರಗಳಲ್ಲಿ ಯಾರು ಸಹಭಾಗಿಯಾಗಿದ್ದರು, ಯಾರಿಗೆ ಎಷ್ಟು ಹಂಚಿಕೆಯಾಗಿದೆ, ಎಷ್ಟು ಕೋಟಿ ರೂಪಾಯಿಗಳ ಸ್ವತ್ತು ಪಾರಾಟವಾಗಿದೆ ಎಂಬುದನ್ನು ನೋಡಬಹುದು. ಆ ಹಣ ಸಿಕ್ಕಿದ್ದರೆ ದಿವಂಗತ ಮಹಾರಾಜರು ಆ ಸ್ಥಿತಿಯಲ್ಲಿರಲಿಲ್ಲ. ಅವರ ಮಗ ಬೆಂಗಳೂರು ಕೋರ್ಟಿನಲ್ಲಿ ದಾವೆ ಹಾಕಿದ್ದ. ಅದರ ವಿಚಾರಣೆಯ ದಿನ ಮಹಾರಾಜರು ದಿವಂಗತರಾದರು. ಆ ದಾವಾದಲ್ಲಿ ಎಲ್ಲ ವಿಷಯಗಳೂ ಇರಬಹುದು; ಗೊತ್ತಿಲ್ಲ. ನಮ್ಮ ರಾಜ್ಯದ ಗೌರವದ ಪ್ರಶ್ನೆ ಅಡಗಿರುವ ಇಂಥ ವಿಷಯಗಳ ಬಗ್ಗೆ ಪ್ರವೇಶ ಮಾಡಿ ನಮ್ಮ ಮಾನ ಮರ್ಯಾದೆಯನ್ನು ಹರಾಜು ಹಾಕಲು ಕಾರಣಕರ್ತರು ಮತ್ತು ನಮ್ಮ ರಕ್ಷಣೆ ಜವಾಬ್ದಾರಿ ಹೊತ್ತಿರುವ ಈ ಸರಕಾರ ತನ್ನ ದಕ್ಷತೆ, ಕರ್ತವ್ಯ ಮತ್ತು ನಿಷ್ಠೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಆದುದರಿಂದ ಈ ರಾಜ್ಯದ ಗೌರವ ಮತ್ತು ಪ್ರತಿಷ್ಠೆಯ ದೃಷ್ಟಿಯಿಂದ ಈ ಸರಕಾರ ತತ್‌ಕ್ಷಣ ಗದ್ದುಗೆಯಿಂದ ಅಧಿಕಾರ ಬಿಟ್ಟು ಇಳಿಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ):— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಆರ್ಥಿಕ ಸಚಿವರು ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಬಹಳ ಸಂತೋಷದಿಂದ ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತಿದ್ದೇನೆ. ಅವರು ಈ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ ಕೆಲವು ವಿಷಯಗಳನ್ನು ಹೇಳಿದರು. ಇಂಟರ್‌ನ್ಯಾಷನಲ್ ಇನ್‌ಫ್ಲೇಷನ್ ಪ್ರಪಂಚದ ಆಹಾರ ಪರಿಸ್ಥಿತಿ, ಫರ್ಟಿಲೈಸರ್ ಪರಿಸ್ಥಿತಿ, ಎನರ್ಜಿ ಪರಿಸ್ಥಿತಿ, ನಮ್ಮ ದೇಶದಲ್ಲಿ 2 ವರ್ಷದಿಂದ ವಿಶೇಷವಾದ ಮಳೆಯ ಅಭಾವ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫ್ಲಡ್ ಹ್ಯಾವಕ್ ಆಗಿರುವುದು, ಗುಲ್ಬರ್ಗ ವಗೈರೆ ಪ್ರದೇಶಗಳಲ್ಲಿ ಅಭಾವ ಇವೆಲ್ಲಾ ಇದ್ದರೂಕೂಡ ಅವರು ಬಹಳ ಬುದ್ಧಿವಂತಿಕೆಯಿಂದ ಬಹಳವಾಗಿ ಯೋಚನೆ ಮಾಡಿ ಒಂದು ಆಯವ್ಯಯ ಪಟ್ಟಿಯನ್ನು ಸಮನ್ವಯವಾಗುವ ರೀತಿಯಲ್ಲಿ ಇಟ್ಟಿದ್ದಾರೆ. ನಮ್ಮ ಆರ್ಥಿಕ ಮಂತ್ರಿಗಳು ವಿಶೇಷ ತಜ್ಞರು, ಅರ್ಥಶಾಸ್ತ್ರದಲ್ಲಿ ಪರಿಣಿತರು,

ಅವರು ಕೇಂಬ್ರಿಡ್ಜ್‌ನಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದು ಆರ್ಥಿಕ ವಿಚಾರದಲ್ಲಿ ಬಹಳ ಅನುಭವಶಾಲಿಗಳಾಗಿದ್ದಾರೆ. ಅಂಥವರು ಸಮಾಜವಾದದ ಹಿನ್ನೆಲೆಯಲ್ಲಿ ಈ ಒಂದು ಆಯುವ್ಯಯ ಪತ್ರವನ್ನು ತಯಾರಿಸಿ ನಮ್ಮ ರಾಜ್ಯ ಸರ್ವಾಂಗ ಸುಂದರವಾಗಿ ಅಭಿವೃದ್ಧಿಯಾಗುವ ರೀತಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಅವರು ದೊಡ್ಡ ದೊಡ್ಡ ಯೋಜನೆಗಳನ್ನು ಸೇರಿಸಿದ್ದಾರೆ, ಕೈಗಾರಿಕೆಗಳು ನೀರಾವರಿ ಯೋಜನೆಗಳನ್ನು ಸೇರಿಸಿದ್ದಾರೆ, ಕೈಗಾರಿಕೆಗಳು ನೀರಾವರಿ ಯೋಜನೆಗಳು ಮುಂತಾದುವನ್ನು ಇದರಲ್ಲಿ ಅಳವಡಿಸಿದ್ದಾರೆ. ಆದರೆ ಒಂದು ಮಾತ್ರ ನಾನು ನಮ್ಮ ಅರ್ಥಮಂತ್ರಿಗಳಿಗೆ ಸಲಹಾ ರೂಪದಲ್ಲಿ ತಿಳಿಸಬೇಕಾಗಿದೆ. ನಮ್ಮ ಮೈಸೂರು ರಾಜ್ಯದಲ್ಲಿ 50 ಸಾವಿರ ಗ್ರಾಮಗಳಿವೆ, 3 ಕೋಟಿ ಜನರಿದ್ದಾರೆ, ನಮ್ಮ ಹಳ್ಳಿಯಲ್ಲಿರುವ ಜನರ ಮೇಲೆ ಈ ಆಯುವ್ಯಯದ ಪರಿಣಾಮವೇನಾಗುತ್ತದೆ ಎಂಬುದನ್ನು ನಾವು ಯೋಚಿಸಿ ನೋಡಬೇಕಾಗುತ್ತದೆ. ಗ್ರಾಮ ರಾಜ್ಯವಾಗಬೇಕೆಂದು ಮಹಾತ್ಮ ಗಾಂಧಿಯವರು ಹೇಳುತ್ತಿದ್ದರು. ಗ್ರಾಮರಾಜ್ಯವೆಂದರೆ ಗ್ರಾಮಗಳಲ್ಲಿರುವ ಪ್ರತಿಯೊಬ್ಬನಿಗೂ ಕೂಡ ಇದು ನಮ್ಮ ಬಜೆಟ್, ಇದರಿಂದ ನಮಗೆ ಉಪಯೋಗವಾಗುತ್ತದೆ. ನಮ್ಮ ಸರಕಾರ ನಮಗೆ ಒಳ್ಳೆಯದನ್ನು ಮಾಡಿ ಕೊಟ್ಟಿದೆ ಎಂಬ ಅರಿವು ಬರುವ ರೀತಿಯಲ್ಲಿ ನಮ್ಮ ಸರಕಾರ ಆಯುವ್ಯಯ ತಯಾರಿಸಬೇಕು, ಸರಿಯಾಗಿ ಖರ್ಚು ಮಾಡಬೇಕು ಎಂಬುದು ನಿರ್ವಿವಾದವಾದುದು. ಇದರ ಅಳತೆಗೋಲು ಇದು. ಒಬ್ಬ ಸಾಮಾನ್ಯ ಹಳ್ಳಿಯ ಮನುಷ್ಯ ಹೇಗೆ ಇದನ್ನು ಅಳೆಯುತ್ತಾನೆಂಬುದೇ ನಮ್ಮ ಅಳತೆಗೋಲು. ಒಂದು ದೊಡ್ಡ ಸೇತುವೆ ಮಾಡಿದರೆ ಅಥವ ಒಂದು ಏರೋಡ್ರಂ ಮಾಡಿದರೆ ಅಥವ ಒಂದು ರೈಲು ಹಾದಿ ನಿರ್ಮಿಸಿದರೆ ಅದು ಅವನ ಮೇಲೆ ಅಷ್ಟು ಪರಿಣಾಮ ಮಾಡುವುದಿಲ್ಲ. ಸಾಮಾನ್ಯವಾಗಿ ಅವನು ನಿರೀಕ್ಷೆ ಮಾಡುವುದು ನನ್ನ ಗ್ರಾಮದಲ್ಲಿ ವಿದ್ಯಾಭ್ಯಾಸದ ಸೌಕರ್ಯವಿದೆಯೇ, ನಮ್ಮ ಮಕ್ಕಳು ಆರೋಗ್ಯವಾಗಿರುವರೇ. ನಮ್ಮ ಸರಕಾರದಿಂದ ನಮಗೆ ಬೇಕಾದ ಆಹಾರ ಪದಾರ್ಥಗಳು ಸಿಕ್ಕುತ್ತವೆಯೇ, ಮನೆಯಿದೆಯೇ ಮಕ್ಕಳಿಗೆ ಕೆಲಸ ಸಿಕ್ಕುತ್ತದೆಯೇ ಎಂಬ ರೀತಿಯಲ್ಲಿ ಅವನ್ನು ಯೋಚನೆ ಮಾಡುತ್ತೇನೆ, ಅಂದಾಗ ಅವನು ಇದನ್ನು ಮೆಚ್ಚಬೇಕು. ಸಾಮಾನ್ಯವಾಗಿ ಹಳ್ಳಿಯಲ್ಲಿರುವ ಪ್ರತಿಯೊಬ್ಬನಿಗೂ ಕೂಡ ಆದಷ್ಟು ಮಟ್ಟಿಗೆ ಸಹಾಯವಾಗುವಂತೆ ಯೋಜನೆ ಮಾಡಬೇಕು. ಆ ಅಳತೆಗೋಲನ್ನು ಉಪಯೋಗಿಸಿ ನಮ್ಮ ಬಜೆಟ್ಟನ್ನು ಅಳೆದಾಗ ನಾನು ನಮ್ಮ ಅರ್ಥಮಂತ್ರಿಗಳಿಗೆ ದೊಡ್ಡ ಯೋಜನೆಗಳನ್ನು ಮಾಡಿ ಅದಾಗಬೇಕು, ಆದರೆ ಇನ್ನೂ ಹೆಚ್ಚು ಹಣವನ್ನು ಹಳ್ಳಿಯವರ ಸೌಕರ್ಯಕ್ಕೆ ಸಾಮಾನ್ಯ ಮನುಷ್ಯನ ಅನುಕೂಲಕ್ಕೆ ಬಳಸುವ ಪ್ರಯತ್ನ ಮಾಡಬೇಕು ಎಂದು ಹೇಳಬೇಕಾಗಿದೆ. ಇದು ಪೀಪಲ್ಸ್ ಬಜೆಟ್, ನಮ್ಮ ರಾಜ್ಯಕ್ಕೆ ನಮ್ಮ ಸರಕಾರ ಮಾಡಿರುವುದು, ನನ್ನ ಬಜೆಟ್ ಇದು ಎಂದು ಅವನ ಮನಸ್ಸಿಗೆ ಸಮಾಧಾನವಾಗುವ ರೀತಿಯಲ್ಲಿ ನಾವು ಬಜೆಟ್ಟನ್ನು ತಯಾರಿಸಬೇಕು ಎಂಬುದನ್ನು ಅರ್ಥಮಂತ್ರಿಗಳಿಗೆ ಹೇಳುತ್ತಿದ್ದೇನೆ.

(ಶ್ರೀ ಎ. ಆರ್. ಬದರೀನಾರಾಯಣ್)

ಈಗ ಇರಿಗೇಷನ್ ತೆಗೆದುಕೊಳ್ಳಿ, ದೊಡ್ಡ ದೊಡ್ಡ ಇರಿಗೇಷನ್ ಪ್ರಾಜೆಕ್ಟ ಗಳನ್ನು ಮಾಡಿ ಅನುಕೂಲಗಳನ್ನು ಮಾಡಿದ್ದಾರೆ. ಮೈನರ್ ಇರಿಗೇಷನ್‌ಗೂ ಬಹಳವಾಗಿ ಹಣವನ್ನು ಒದಗಿಸಿದ್ದಾರೆ. ನಮ್ಮ ಮಲೆನಾಡು ಭಾಗದಲ್ಲಿ ಅನೇಕ ಕೆರೆಗಳು ಇವೆ, ಕೆರೆಗಳಲ್ಲಿ ನೀರು ಇರುವುದಿಲ್ಲ. ಏಕೆ ಇರುವುದಿಲ್ಲ ಎಂದರೆ, ಮಳೆಗಾಲದಲ್ಲಿ ಬೇಕಾದಷ್ಟು ಮಳೆ ಬರುತ್ತದೆ, ಮಳೆ ಬಂದು ಗುಡ್ಡದ ಮೇಲಿರ ತಕ್ಕ ಮಣ್ಣು ಕೊಚ್ಚಿಕೊಂಡು ಬಂದು ಕೆರೆಯನ್ನು ಮುಚ್ಚಿಕೊಳ್ಳುತ್ತದೆ. ಮಣ್ಣು ಹರಿದು ಕೆರೆಯನ್ನು ಮುಚ್ಚತಕ್ಕ ಕ್ರಮ ಏನು ಇದೆ, ಅದನ್ನು ತಪ್ಪಿಸುವುದಕ್ಕೆ ಸರ್ಕಾರ ತಕ್ಕ ಪ್ರಯತ್ನಮಾಡಿ ಪ್ರತಿಯೊಂದು ಗ್ರಾಮದಲ್ಲಿರತಕ್ಕ ಕೆರೆಗಳಲ್ಲಿ ನೀರು ನಿಲ್ಲುವ ಹಾಗೆ ವ್ಯವಸ್ಥೆ ಮಾಡಬೇಕು. 5-15 ಎಕರೆ ಭೂಮಿಯನ್ನು ಆವರಿಸಿರ ತಕ್ಕ ಕೆರೆಗಳನ್ನು ದುರಸ್ತಿ ಮಾಡಬೇಕು ಮತ್ತು ಇರಿಗೇಷನ್ ವೆಲ್ಸ್‌ನಿಂದ ಸಾಮಾನ್ಯವಾಗಿ ನೂರಕ್ಕೆ 25 ಜನಕ್ಕೆ ಅನುಕೂಲವಾಗುತ್ತದೆ ಆದರೆ ನೂರಕ್ಕೆ 75 ಭಾಗ ಜನ ಹಳ್ಳಿಯಲ್ಲಿರತಕ್ಕವರಿಗೆ ನೀರಾವರಿ ಯೋಜನೆಯ ಒಂದು ಅನು ಕೂಲವೂ ದೊರೆಯುವುದಿಲ್ಲ. ಕೆಲವರು ನೀರಾವರಿ ಸೌಕರ್ಯದಿಂದ ದೊಡ್ಡವ ರಾಗುತ್ತಾರೆ, ಆದರೆ ನೂರಕ್ಕೆ 75 ಭಾಗದ ಜನರು ನೀರಾವರಿ ಸೌಕರ್ಯವಿಲ್ಲದೆ ಅವರು ಬಹಳ ಬಡತನದಲ್ಲಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕು. ಆದ್ದರಿಂದ ನಾವು ಭೂಗರ್ಭದಲ್ಲಿರತಕ್ಕ ನೀರನ್ನು ಬೋರ್‌ವೆಲ್‌ಗಳ ಮುಖಾಂತರ, ಡೀಪ್ ಪಂಪು ಸೆಟ್ಟುಗಳ ಮುಖಾಂತರ ತೆಗೆದು ಅದನ್ನು ಇರಿಗೇಷನ್‌ಗೆ ಬರ ತಕ್ಕಂಥ ರೀತಿಯಲ್ಲಿ ಅವರಿಗೆ ಸೌಕರ್ಯಗಳನ್ನು ಮಾಡಿಕೊಟ್ಟರೆ ನೀರಾವರಿ ಸೌಕರ್ಯವಿಲ್ಲದೇ ಇರತಕ್ಕ ರೈತರಿಗೂ ಇದರಿಂದ ಅನುಕೂಲವಾಗುತ್ತದೆ. ಇದಕ್ಕೂ ಹೆಚ್ಚಿನ ಹಣವನ್ನು ಒದಗಿಸಬೇಕು ಎನ್ನುವ ಸಲಹೆಯನ್ನು ಮಾನ್ಯ ಅರ್ಥಸಚಿವರು ಹೇಳಬೇಕು ಎಂದು ಆಶೆ ಮಾಡುತ್ತೇನೆ.

ಇನ್ನು ಪವರ್ ಪ್ರಾಜೆಕ್ಟುಗಳು, ನಮ್ಮ ಕರ್ನಾಟಕ ರಾಜ್ಯದಲ್ಲಿ ಬರುಬರುತ್ತಾ ಮಳೆ ಕಡಿಮೆಯಾಗುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ, ನಮ್ಮ ಕಾಡುಗಳು ನಾಶವಾಗುತ್ತಾ ಇರುವುದು. ಮಳೆ ಕಡಿಮೆಯಾಗಿರುವುದರಿಂದ ನಮ್ಮ ಹೈಡಲ್ ಪ್ರಾಜೆಕ್ಟಗಳಿಂದ ನಾವು ಎಷ್ಟು ಅನುಕೂಲವನ್ನು ಕಲ್ಪಿಸಬಹುದಿತ್ತೋ ಅಷ್ಟು ಅನುಕೂಲವನ್ನು ಕಲ್ಪಿಸಿಕೊಡಲು ಸಾಧ್ಯವಾಗುತ್ತಿಲ್ಲ. ಲಿಂಗನಮಕ್ಕಿ ಡ್ಯಾಂನಲ್ಲಿ ನೀರು ಇಲ್ಲದೆ ಪವರ್ ಕಟ್ ಮಾಡಬೇಕಾಗಿ ಬಂತು. ಅದಕ್ಕಾಗಿ ಥರ್ಮಲ್ ಪವರ್ ಮತ್ತು ನ್ಯೂಕ್ಲಿಯರ್ ಪವರ್ ಮಾಡಬೇಕು ಎನ್ನತಕ್ಕ ಯೋಜನೆ ಇದೆ ಎನ್ನತಕ್ಕದ್ದನ್ನು ಹೇಳಿದ್ದಾರೆ. ಥರ್ಮಲ್ ಪ್ಲಾಂಟ್, ನ್ಯೂಕ್ಲಿಯರ್ ಪ್ಲಾಂಟ್ ಮಾಡುವುದಕ್ಕೆ ಯಾವ ಯೋಜನೆಯನ್ನು ಮಾಡಿದ್ದಾರೆ? ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಇಟ್ಟಿದ್ದಾರೆ ಎನ್ನತಕ್ಕದ್ದು ಗೊತ್ತಿಲ್ಲ. ಆದ್ದರಿಂದ ಈ ಒಂದು

ಥರ್ಮಲ್ ಪವರ್ ಪ್ಲಾಂಟಗಳನ್ನು ನಿರ್ಮಾಣ ಮಾಡಿ ಅನುಕೂಲ ಮಾಡಬೇಕು ಎಂದು ಹೇಳುತ್ತೇನೆ. ಗುಜರಾತ್ ಸ್ಟೇಟ್‌ನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ ಏನೂ ಇಲ್ಲ ಬರೀ ಥರ್ಮಲ್ ಪವರ್‌ನಿಂದ ಅಲ್ಲಿ ಒಂದು ದಿವಸವೂ ಪವರ್‌ನ ಅಭಾವ ಇಲ್ಲ ಎನ್ನತಕ್ಕದ್ದನ್ನು ನಾನು ತಿಳಿದುಕೊಂಡಿದ್ದೇನೆ.

ವ್ಯವಸಾಯಕ್ಕೆ ಬಂದರೆ, ಆಹಾರ ಪದಾರ್ಥಗಳ ಬೆಳೆ ಜಾಸ್ತಿಯಾಗುತ್ತಾ ಇದೆ ಎನ್ನತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ಈಗ ಲ್ಯಾಂಡ್ ರಿಫಾರಮ್ಸ್ ಬಂದಿದೆ. ಇದರಿಂದ ಎಷ್ಟು ಜನಕ್ಕೆ ಉಪಯೋಗವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ನೋಡಿದಾಗ ಬಹುಶಃ ಜಮೀನು ಇಲ್ಲದಿರತಕ್ಕವರ ಸಂಖ್ಯೆ ನೂರಕ್ಕೆ 50 ಜನ ಆದರೂ ಉಳಿಯುತ್ತಾರೆ. ಲ್ಯಾಂಡ್ ಲೆಸ್ ಇದ್ದೇ ಇರುತ್ತಾರೆ, ಲ್ಯಾಂಡ್‌ಲೆಸ್ ಲೇಬರರ್ಸ್ ಇದ್ದೇ ಇರುತ್ತಾರೆ, ಲ್ಯಾಂಡ್‌ಲೆಸ್ ಲೇಬರರ್ಸ್ ಪರಿಸ್ಥಿತಿ ಹಳ್ಳಿಯಲ್ಲಿ ಏನು ಎಂದು ಯೋಚನೆಮಾಡಿ ನೋಡಿದಾಗ ಅವರಿಗೆ ಕೊಡತಕ್ಕ ಸಂಬಳಸಾರಿಗೆಗಳು, ವೇತನವನ್ನು ನೋಡಿದರೆ, ಅವರಿಗೆ ಅವರ ಸಂಸಾರವನ್ನು ನಡೆಸುವುದಕ್ಕೂ ಆಗುವುದಿಲ್ಲ. ಇದನ್ನು ನಾವು ಯೋಚನೆಮಾಡಿ ನೋಡಿದಾಗ ವ್ಯವಸಾಯದ ಖರ್ಚು ಲೇಬರ್ ಚಾರ್ಜಸ್, ಫರ್ಟಿಲೈಸರ್ಸ್, ಮತ್ತು ನೀರಿನ ಸೌಕರ್ಯ ಇವೆಲ್ಲದ್ದರಿಂದ ಆಹಾರ ಪದಾರ್ಥಗಳ ಬೆಲೆಯೂ ಜಾಸ್ತಿಯಾಗುತ್ತಿದೆ. ಅದಕ್ಕೋಸ್ಕರ ನೀರಿನ ಸೌಕರ್ಯವೊಂದನ್ನು ನಾವು ಮಾಡಿ ಕೊಡದೇಹೋದರೆ, ಹಳ್ಳಿಯ ಜನರಿಗೆ, ಕೂಲಿ ಮಾಡುವಂಥ ಜನರಿಗೆ ನಾವು ಯಾವ ಸಹಾಯವನ್ನೂ ಮಾಡಿದಂತಾಗುವುದಿಲ್ಲ. ಅವರ ವಸತಿ, ವೇತನ ಇವುಗಳು ಕ್ರಮವಾಗಿ ಬರುವಂಥ ಒಂದು ವ್ಯವಸ್ಥೆಯನ್ನು ನಾವು ಮಾಡಬೇಕು ಎನ್ನತಕ್ಕದ್ದು ನನ್ನ ಅಭಿಪ್ರಾಯ ಈಗ ಜಮೀನನ್ನು ಹರಿಜನ ಗಿರಿಜನರಿಗ ಕೊಡುತ್ತಾರೆ. ಅವರ ಉದ್ಧಾರವಾಗಬೇಕು ಎನ್ನುವುದು ಈಗ ಜನಗಳಲ್ಲಿ ಅರಿವಾಗಿದೆ. ಬಹಳ ಜನರಿಗೆ ಹರಿಜನರ ಉದ್ಧಾರವಾಗಬೇಕು ಎನ್ನುವ ಆಶೆ. ಆದರೆ ಏನಾಗಿದೆ ಎಂದರೆ, ಹರಿಜನರ ಉದ್ಧಾರವಾಗಬೇಕು ಎಂದು ಹೇಳುವುದು ಒಂದು ಫ್ಯಾಷನ್ ಆಗಿದೆ. ಇದು ಕಾರ್ಯರೂಪಕ್ಕೆ ಎಷ್ಟರಮಟ್ಟಿಗೆ ಬರುತ್ತದೆ ಎನ್ನುವುದನ್ನು ನಾವು ನೋಡಬೇಕು. ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿಯಲ್ಲಿ ಹರಿಜನರೊಬ್ಬರ ಮರ್ಡರ್ ಆಯಿತು, ಒಬ್ಬರಿಗೆ ಜಮೀನನ್ನು ಕಸಿದುಕೊಂಡರು, ಒಬ್ಬರಿಗೆ ಹೊಡೆದರು ಎಂದು ಹೇಳುವುದನ್ನು ನಾವು ನೋಡುತ್ತಿದ್ದೇವೆ. ಒಂದೆರಡು ಜಮೀನನ್ನು ಅವರಿಗೆ ಕೊಡುವುದರಿಂದ ಮಾತ್ರ ಅವರ ಉದ್ಧಾರವಾಗುತ್ತದೆಯೋ ಅಥವಾ ಒಂದು ಮನೆಯನ್ನು ಕಟ್ಟಿಕೊಟ್ಟರೆ ಅವರ ಉಧ್ಧಾರವಾಗುತ್ತದೆಯೋ ಎನ್ನತಕ್ಕದ್ದನ್ನು ಯೋಚನೆ ಮಾಡಿ ನೋಡಿದಾಗ ನನ್ನ ಅಭಿಪ್ರಾಯದಲ್ಲಿ ಇದು ಪ್ರಯೋಜನವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ 400-500 ಎಕರೆ ಜಮೀನನ್ನು ಒಂದು ಪ್ಲಾಟ್ ಮಾಡಿ ಅದನ್ನು ಬುಲ್ಡೋಜರ ಮಾಡಿಸಿ ಕ್ರಮವಾಗಿ

(ಶ್ರೀ ಎ. ಆರ್. ಬದರೀನಾರಾಯಣ್)

ಅದನ್ನೆಲ್ಲಾ ಒಳ್ಳೆಯ ಪರಿಸ್ಥಿತಿಗೆ ತಂದು ಅದರ ಹತ್ತಿರ ಒಂದು ಕಾಲೋನಿಯನ್ನು ಮಾಡಿಕೊಟ್ಟು ಅವರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟರೆ ಮಾತ್ರ ಹರಿಜನರ ಉದ್ಧಾರವಾಗುತ್ತದೆಯೇ ಹೊರತು ಕೇವಲ ಒಂದು ಎಕರೆ ಭೂಮಿ ಕೊಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ಕಾಲೋನಿಯನ್ನು ಮಾಡಿ ಅವರಿಗೆ ಬೇಕಾದಂಥ ಫೆಸಿಲಿಟೀಸ್ ಕೊಟ್ಟು ತಕ್ಕ ಏರ್ಪಾಡು ಮಾಡಿದರೆ ಹರಿಜನರ ಉದ್ಧಾರವಾಗುತ್ತದೆ. ಏಕೆಂದರೆ ಇವರು ತಲೆ ತಲೆಯೊಂತರದಿಂದ ಇವರು ಹೆಚ್ಚಿನ ಶಕ್ತಿಯುತರಾದ ಜನ ಅಲ್ಲ. ಇವರನ್ನು ಶಕ್ತಿಯುತರಾಗಿ ಮಾಡಬೇಕಾಗಿದ್ದರೆ, ಇಂಥ ಒಂದು ಪರ್ಮನೆಂಟ್ ರಿಲೀಫ್ ಕೊಟ್ಟರೆ ಇದು ಸಾಧ್ಯವೇ ಹೊರತು ಇಲ್ಲದಿದ್ದರೆ ಏನೂ ಆಗುವುದಿಲ್ಲ.

ಮಲೆನಾಡಿನ ವಿಚಾರದಲ್ಲಿ ಹೇಳುವುದಾದರೆ, ಕರ್ನಾಟಕ ರಾಜ್ಯದ ಕಣಜ ಮಲೆನಾಡು ಎಂದು ಕರೆದಿದ್ದಾರೆ. ಬೇಕಾದಷ್ಟು ಆಹಾರ ಪದಾರ್ಥಗಳನ್ನು ಬರೀಯ ಮಳೆಯ ಸೌಕರ್ಯದಿಂದ, ನೀರಾವರಿಯ ಸೌಕರ್ಯವಿಲ್ಲದೆ ಬೆಳೆಯುತ್ತಾರೆ. ಅಲ್ಲಿ ಯಾವ ಒಂದು ನೀರಾವರಿಯಿಂದಲೂ ಅನುಕೂಲವಾಗುವುದಿಲ್ಲ, ನೀರಾವರಿಯ ಅನುಕೂಲ ಹರಿಹರ, ಚಿತ್ರದುರ್ಗ ಮತ್ತೊಂದು ಕಡೆಗೆ ಹೋಗುತ್ತದೆ. ಅಲ್ಲಿ ಬೇಕಾದಷ್ಟು ಮಳೆ ಬರುತ್ತದೆ, ಅಲ್ಲಿಯ ಜನರಿಗೆ ಬೇಕಾದದ್ದು ಮಳೆಯ ನೀರನ್ನು ಸರಿಯಾಗಿ ಉಪಯೋಗಿಸುವುದು. ಮಲೆನಾಡು ಬ್ಲಾಟಿಂಗ್ ಪೇಪರ್ ಇದ್ದ ಹಾಗೆ, ಮಳೆ ಬರುತ್ತದೆ ಮಳೆಯ ನೀರು ಭೂಮಿಯಲ್ಲಿಯೇ ಇರುತ್ತದೆ. ಆದ್ದರಿಂದ ಅಲ್ಲಿ ಡೀಪ್ ವೆಲ್ಸ್ ಮಾಡಿ ನೀರನ್ನು ತೆಗೆಯುವ ಹಾಗೆ ಮಾಡಿಕೊಟ್ಟರೆ ಬಹುಶಃ ಅವರು ಹೆಚ್ಚಿನ ಆಹಾರ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕವಾದ ಯೋಜನೆ ಮಾಡಬೇಕು. ಮಲೆನಾಡಿನ ಪ್ರಾಬ್ಲಮ್ ಅನ್ನು ನ್ಯಾಷನಲ್ ಪ್ರಾಬ್ಲಮ್ ಆಗಿ ತೆಗೆದುಕೊಳ್ಳಬೇಕು. ಬಯಲು ಸೀಮೆಯನ್ನು ಏಕೆ ತೆಗೆದುಕೊಳ್ಳಬಾರದು ಎನ್ನುವ ಪ್ರಶ್ನೆಯಲ್ಲ. ಮಲೆನಾಡಿನಲ್ಲಿ ದೈವದತ್ತವಾಗಿ ವಿಶೇಷವಾದ ಐಶ್ವರ್ಯ ಇರುತ್ತದೆ. ಇದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ; ಮತ್ತು ಅನುಕೂಲವಾಗುತ್ತದೆ. ಇದರಿಂದ ಮಲೆನಾಡಿಗೆ ಬೃಹತ್ ಯೋಜನೆ ಆಗಬೇಕು ಎಂದು ನಾನು ಹೇಳುತ್ತೇನೆ. ಈಗ ವೆಸ್ಟರ್ನ್ ಘಾಟ್ಸ್ ರೀಜನ್ ಎನ್ನುವ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅದಕ್ಕೆ ಬೊಂಬಾಯಿನ ಮುಖ್ಯಮಂತ್ರಿಗಳು ಚೇರ್ಮನ್ ಆಗಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಅದಕ್ಕೆ ಹೋಗುತ್ತಾರೆ. ಇದು ಬಹಳ ವ್ಯಾಪಕವಾಗಿ ಕೆಲಸ ಮಾಡುತ್ತದೆ. ಯಾವ ಕಾರಣದಿಂದ ಮಲೆನಾಡಿನಲ್ಲಿ ಮಳೆ ಕಡಿಮೆಯಾಗಿದೆ ಯಾರೇ ಅಲ್ಲಿಗೆ ಹೋದರೂ ಅದು ಮಲೆನಾಡೇ ಎಂದು ಹೇಳುವ ಹಾಗಿಲ್ಲ.

4-00 P. M.

ಕಾಡಿನ ಒಂದು ನಿರ್ವಂಶವಾಗುತ್ತಾ ಇರುವುದನ್ನು ನೋಡಿದರೆ ನನ್ನ ಮನಸ್ಸಿಗೆ ಬಹಳ ದುಃಖವಾಗುತ್ತದೆ. ನೂರಾರು ಎಕರೆ ಜಮೀನಿನಲ್ಲಿ ಕಾಡು ನಾಶವಾಗುತ್ತಿದೆ ಅದರ ಅಭಿವೃದ್ಧಿ ಕಡೆಗೆ ಗಮನ ಹರಿಸಬೇಕು, ಕಾಡಿನ ವೈಶಿಷ್ಟ್ಯ ಏನು ಎಂದರೆ ಅದು ಎಲ್ಲಿಯ ವರೆಗೆ ಸಮೃದ್ಧಿಯಾಗಿರುತ್ತದೆ ಅಲ್ಲಿನ ವರೆಗೆ ದೇಶದ ಸಂಪತ್ತು ಅಭಿವೃದ್ಧಿಯಾಗುತ್ತದೆ ನಮ್ಮ ಮಲೆನಾಡಿನ ವೈಶಿಷ್ಟ್ಯವೇನೆಂದರೆ ಕಾಡು ಅದು ದೈವದತ್ತವಾದ ಮತ್ತು ಪ್ರಗತಿದತ್ತವಾದ ಕಾಡು, ಅಲ್ಲಿ ಕೇವಲ ಮಳೆಯು ಆಧಾರದ ಮೇಲೆ ಬೆಳೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ನೀರಾವರಿಯಿಲ್ಲವೆಂದಲ್ಲ ಆದರೆ ಅದರ ಉಪಯೋಗ ಬೇರೆಯವರಿಗೆ ಸಿಕ್ಕುತ್ತಿದೆ. ನಮ್ಮ ಮಲೆನಾಡು ಪ್ರದೇಶಕ್ಕೆ ಒಂದು ವೆಟರ್ನರಿ ಕಾಲೇಜು ಮತ್ತು ಅಗ್ರಿಕಲ್ಚರ್ ಕಾಲೇಜುಗಳು ಇಲ್ಲ. ಅವುಗಳನ್ನು ಅಲ್ಲಿ ಮಾಡಿದರೆ ನಮ್ಮ ಮಲೆನಾಡು ಜನರಿಗೆ ಬಹಳ ಅನುಕೂಲವಾಗಬಹುದು.

ಇನ್ನು ಅನಿಮಲ್ ಹಸ್ಬಂಡರಿ ಇಲಾಖೆಯಿಂದ ಅಲ್ಲಿ ಒಳ್ಳೆಯ ತಳಿ ಹಸುಗಳನ್ನು ಸಾಕಿ ಒಳ್ಳೆಯ ಡೈರಿ ಮಾಡುವುದಕ್ಕೆ ಅನುಕೂಲವಿದೆ. ಮಲೆನಾಡಿನ ಕ್ಯಾಟಲ್ ಅಂದರೆ ಮಲೆನಾಡಿನ ಗಿಡ್ಡಗಳು ಎಂದು ಬಹಳ ಹೆಸರುವಾಸಿಯಾಗಿದೆ. ಅಂತಹ ತಳಿಗಳು ಅಲ್ಲಿ ಹೆಚ್ಚಿಗೆ ಮಾಡಬಹುದು.

ಇನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಒಂದು ಫ್ರೂಟ್ ಪ್ರಾಡಕ್ಟ್ಸ್ ತಯಾರಿಸುವುದಕ್ಕೆ ಒಂದು ಕೇಂದ್ರವನ್ನು ಮಾಡಬಹುದು. ಬೇಕಾದಷ್ಟು ಹಣ್ಣು ಸಿಕ್ಕುತ್ತವೆ. ಬಾಳೆಹಣ್ಣು ಮಾವಿನ ಹಣ್ಣು ಇನ್ನು ಇತರೆ ಬೇಕಾದಷ್ಟು ಹಣ್ಣುಗಳು ಸಿಕ್ಕುವುದರಿಂದ ಅಲ್ಲಿ ನಮ್ಮ ತೋಟಗಾರಿಕೆ ಇಲಾಖೆಯವರು ಯಾವುದಾದರೂ ಒಂದು ಕೇಂದ್ರವನ್ನು ತೆಗೆದರೆ ನಮ್ಮ ಮಲೆನಾಡಿನ ಐಶ್ವರ್ಯ ಹೆಚ್ಚುತ್ತದೆ. ಇದರ ಬಗ್ಗೆ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಗಮನ ಹರಿಸಬೇಕು.

ಇನ್ನು ಆಗ್ರೋ ಇಂಡಸ್ಟ್ರೀಸ್ ಕಾಂಪ್ಲೆಕ್ಸ್ ಏನು ಒಂದು ಮಾಡಿದ್ದಾರೆ ಅದು ಒಳ್ಳೆಯ ಕೆಲಸವೇ. ಇನ್ನು ಅರಣ್ಯದ ವಿಚಾರವಾಗಿ ಹೇಳಿದೆ ಅದರಲ್ಲಿ ಕನ್ಸರ್‌ವೇಷನ್ ಇಲ್ಲ ಎಕ್ಸಪ್ಲೈಟೇಷನ್ ಆಗುತ್ತಿದೆ. ಅರಣ್ಯವನ್ನು ಕಡಿದು ಹಾಳು ಮಾಡುತ್ತಿದ್ದಾರೆಯೇ ಹೊರತು ರೀ ಪ್ಲಾಂಟೇಷನ್ ಮಾಡಿದ್ದಾರೆಯೇ ಎಂದು ನೋಡಬೇಕಾಗಿದೆ. ಅದರ ಅಭಿವೃದ್ಧಿ ಕಡೆ ಗಮನವಿಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಈ ವಿಚಾರದಲ್ಲಿ ಹೆಚ್ಚಿನ ಗಮನ ಕೊಡಬೇಕೆಂದು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡುವ ವಿಚಾರಕ್ಕೆ ಮಾನ್ಯ ಸಚಿವರು ಯೋಚನೆ ಮಾಡಬೇಕು.

(ಶ್ರೀ ಎ. ಆರ್. ಬದರೀನಾರಾಯಣ್)

ಇನ್ನು ಲ್ಯಾಂಡ್ ರೀ ಫಾರ್ಮ್ಸ್ ಏನು ತಂದಿದ್ದಾರೆ ಅದು ಒಳ್ಳೆಯದೆ. ಆದರೆ ಅದು ಖಚಿತವಾಗಿ ಇಷ್ಟು ಕಾಲದೊಳಗೆ ಟೆನೆನ್ಸಿಯಿಲ್ಲ ಎಲ್ಲರೂ ಟಿಲ್ಲರ್ ಆಫ್ ದಿ ಓನರ್ ಆಫ್ ದಿ ಸಾಯಿಲ್ ಎಂದು ಮಾಡಬೇಕು. ಇದು ಬಹಳ ನಿಧಾನವಾಗುತ್ತಿದೆ. ಇನ್ನು ಟ್ರಿಬ್ಯೂನಲ್ಸ್ ಕೆಲಸ ಮಾಡುವುದರಲ್ಲಿ ನಮ್ಮ ಕಡೆ ಯಲ್ಲಿ ಬೇಕಾದಷ್ಟು ಕೇಸುಗಳು ಹತ್ತು ಇಪ್ಪತ್ತಲ್ಲ ಸಾವಿರಾರು ಕೇಸುಗಳು ಇವೆ. ಅವುಗಳು ಬಹಳ ಬೇಗ ತೀರ್ಮಾನವಾಗಬೇಕು. ಕೆಲವು ಹೈಲಿ ಕಂಟೆಸ್ಟೆಡ್ ಕೇಸ್ ಇದ್ದರೆ ಅಂಥವುಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಇನ್ನು ಒಂದು ವರ್ಷದಲ್ಲಿ ಲ್ಯಾಂಡ್ ರೀ ಫಾರ್ಮ್ಸ್ ಜಾರಿಗೆ ತರಬೇಕೆಂದು ಮಾಡಬೇಕು. 10 ಎಕರೆ 5 ಎಕರೆ ಏನು ಇಟ್ಟುಕೊಂಡಿದ್ದಾರೆ ಅದನ್ನು ಅವರಿಗೆ ಬಿಡಿ. ಆದರೆ ಇದರಲ್ಲಿ ಗಂಡ ಸತ್ತ ವರಿಗೆ ಪರಿಹಾರ ಸರಿಯಾದ ರೀತಿಯಲ್ಲಿ ಕೊಡುವಂತೆ ವ್ಯವಸ್ಥೆ ಮಾಡಬೇಕು. ಕೊನೆಪಕ್ಷ ಅವರಿಗೆ ಕೊಡಬೇಕಾದಂತಹ ಹಣವನ್ನು ಅದರೂ ಕೂಡ ಬೇಗ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ವಿಧವೆಯವರಿಗೆ ಮತ್ತು ಅಂಗವಿಕಲರಿಗೆ ಮತ್ತು ಭೂಮಾಲೀಕರುಗಳಿಗೆ, ಪೊಲಿಟಿಕಲ್ ಸಫರರ್ಸ್‌ಗೆ ಕೊಡುವಂತೆ ಪೆನ್ಷನ್ ಕೊಟ್ಟರೆ ಆಗಬಹುದೇ ? 100 ರೂಪಾಯಿಗಳಿಂದ 150 ರೂಪಾಯಿ ಪೆನ್ಷನ್ ಕೊಡಬೇಕೇ ?

ಶ್ರೀ ಎ.ಆರ್ ಬದರೀನಾರಾಯಣ್ —ಹಾಗಲ್ಲ, ಅವರಿಗೆ ಏನು ಪರಿಹಾರ ಕೊಡಬೇಕೋ ಅದನ್ನು ಬೇಗ ಕೊಟ್ಟರೆ ಬೇರೆ ಯಾವುದಾದರೂ ಒಂದು ಇಂಡಸ್ಟ್ರೀಸ್‌ನ್ನು ಅಥವಾ ಇನ್ನು ಏನನ್ನಾದರೂ ಮಾಡಿ ಅವರ ಜೀವನೋಪಾಯ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಇಂಡಸ್ಟ್ರೀಸ್ ವಿಚಾರವಾಗಿ ಬಂದರೆ ನಮ್ಮ ಕರ್ನಾಟಕದಲ್ಲಿ ಮಂಗಳೂರು ಹಾರ್ಬರ್ ಆಗಿರತಕ್ಕಂಥಾದ್ದು ಕರ್ನಾಟಕ ರಾಜ್ಯಕ್ಕೆ ಒಂದು ಹೆಚ್ಚಿನ ಕೈಗಾರಿಕಾಭಿವೃದ್ಧಿಗೆ ಬಹಳ ಸಹಕಾರಿಯಾಗುತ್ತದೆ. ಇನ್ನು ಕುದುರೆಮುಖ ಪ್ರಾಜೆಕ್ಟ್ ನಾನ್ನೂರು ಕೋಟಿ ರೂಪಾಯಿ ಪ್ರಾಜೆಕ್ಟ್ ಏನು ಇದೆ ಬಹುಶಃ ಮಲೆನಾಡಿನ ಭವಿಷ್ಯ ಬಹಳ ಆಶಾದಾಯಕವಾಗುತ್ತದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇನ್ನು ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಹೇಳುವುದು ಇಷ್ಟೆ. ಅಲ್ಲಿ ಸರಿಯಾಗಿ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಅದನ್ನು ನೇರವಾಗಿ ತಮ್ಮ ಗಮನವನ್ನು ಹರಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ದಿವಾನ್ ವಿಶ್ವೇಶ್ವರಯ್ಯನವರು

ಇದ್ದಾಗ ಅದನ್ನು ವೈಟ್ ಎಲಿಫೆಂಟ್ ಎಂದು ಹೇಳುತ್ತಿದ್ದರು. ಅದರ ಬಗ್ಗೆ ತಮಗೂ ಕೂಡ ಅನೇಕ ರಿಪೋರ್ಟ್ಸ್ ಬಂದಿರಬಹುದು. ಅದನ್ನು ತಾವು ಸರಿ ಮಾಡಬೇಕು. ಅಲ್ಲಿ ಕೆಲವರು ಬಹಳ ದಿವಸಗಳಿಂದ ಸೇರಿಕೊಂಡು ಬಿಟ್ಟಿದ್ದಾರೆ ಆದನ್ನು ಪುನರುಜ್ಜೀವನಗೊಳಿಸಬೇಕೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಕೆಲವು ಪಟ್ಟಬದ್ಧ ಹಿತಾಸಕ್ತಿಗಳು ಶಾಶ್ವತವಾಗಿ ಸೇರಿಕೊಂಡಿವೆ. ಇದರಿಂದ ಕೈಗಾರಿಕಾ ಬೆಳವಣಿಗೆಗೆ ಧಕ್ಕೆ ಉಂಟಾಗಿದೆಯೆಂದು ಹೇಳುತ್ತಿದ್ದೇನೆ.

ಶ್ರೀ ಎ. ಆರ್. ಬದರೀನಾರಾಯಣ್.—ಅಲ್ಲಿ ಏನಾಗುತ್ತಿದೆ ಎಂದರೆ ರಾ ಮೆಟಿರಿಯಲ್ಸ್ ಇನ್ನು ವಾಟರ್ ಫೆಸಿಲಿಟಿ ಇವುಗಳನ್ನು ಒದಗಿಸುವುದಾದರೆ ಅನೇಕ ನಿರುದ್ಯೋಗಿ ಯುವಕರು ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದು ಅಧಿಕಾರಿಗಳನ್ನು ಕಂಡರೆ ಅವರಿಗೆ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ. ಅಧಿಕಾರಿಗಳು ತಮ್ಮ ಕೈಯಿಂದ ಹಣವನ್ನು ಕೊಟ್ಟ ಹಾಗೆ ಏನೋ ಒಂದು ಉದಾಸೀನ ಮನೋಭಾವದಿಂದ ವರ್ತಿಸುತ್ತಾರೆ. ಇದು ನಮ್ಮ ಅಧಿಕಾರಿಗಳಲ್ಲಿ ಹೋಗಬೇಕು. ಮಾನ್ಯ ಮಂತ್ರಿಗಳಲ್ಲಿ ಒಂದು ಮನವಿ ಏನೆಂದರೆ ಶ್ರೀಮಾನ್ ವೆಂಕಟರಾವ್‌ನ್‌ರವರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಯಾರುಯಾರು ನಿರುದ್ಯೋಗಿ ತರುಣ ಇದ್ದರೆ ಅವರನ್ನು ಬರಮಾಡಿಕೊಳ್ಳುವುದು ಅವರನ್ನು ನಿಮ್ಮ ಪ್ರಾಬ್ಲಮ್ಸ್ ಏನ ಎಂದು ಕೇಳಿ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನ್ನು ನಡೆಸಲು ಬಹಳ ಪ್ರೋತ್ಸಾಹ ಕೊಡುತ್ತಿದ್ದರು. ಅದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ತಾವು ಇದರ ಕಡೆಗೆ ಗಮನ ಹರಿಸಬೇಕು. ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ದುಡ್ಡು ಇದ್ದವರು ಇದ್ದಾರೆ ಅದನ್ನು ಮಾಡಿಕೊಂಡು ಹೋಗುತ್ತಾರೆ. ನಮ್ಮ ಯುವಕರಿಗೆ ಹೆಚ್ಚಿನ ಪ್ರೋತ್ಸಾಹಕೊಡ ಬೇಕು ತಾವು ಪರಸನಲ್ ಇಂಟರೆಸ್ಟ್ ತೆಗೆದುಕೊಳ್ಳಬೇಕೆಂದು ಅವರಿಗೆ ಸಹಾಯ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಒಂದು ವಿಚಾರ ವೆಂದರೆ ಗಂಧದ ಮರದ ವಿಚಾರದಲ್ಲಿ ಕೇಳಿಕೊಳ್ಳುವುದು ಏನೆಂದರೆ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಗಂಧದ ಮರವನ್ನು 20 ರಿಂದ 25 ರಸ್ಟು ಮರವನ್ನು ರಿಯಾಯಿತಿ ದರದಲ್ಲಿ ಕೇಳುತ್ತಿದ್ದಾರೆ. ಅದನ್ನು ಅವರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ. ಕಾಡು ನಾಶವಾಗುತ್ತಿರುವುದರಿಂದ ಎಷ್ಟೋ ಸಂಸಾರಗಳು ನಮ್ಮ ಮೈಸೂರು ರಾಜ್ಯದಲ್ಲಿ ನಾಶವಾಗುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದ ವಿಧಾನ ಸೌಧದಲ್ಲಿ ನಮ್ಮ ಕ್ಯಾಬಿನೆಟ್ ರೂಮಿನ ಹತ್ತಿರ ಹೋದರೆ ಶ್ರೀಗಂಧದ ವಾಸನೆ ಮತ್ತು ಅವರ ಕುಶಲ ಕೈಗಾ

(ಶ್ರೀ ಎ. ಆರ್. ಬದರೀನಾರಾಯಣ್)

ರಿಕೆ ಬಗ್ಗೆ ಒಂದು ಸಂತೋಷವನ್ನುಂಟು ಮಾಡುತ್ತದೆ. ಆದ್ದರಿಂದ ಇವರಿಗೆ ತಾವು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅವರು ಕೇಳತಕ್ಕಂಥ 25 ಟನ್ ಗಂಧದ ಮರವನ್ನು ಕೊಡಿರಿ. ಆದರೆ ಅದನ್ನು ಬೇರೆಯವರಿಗೆ ಚಾರ್ಜು ಮಾಡುವ ಹಾಗೆ ಮಾಡಿದರೆ ಸಾಧ್ಯವಾಗುವುದಿಲ್ಲ 1973 ರಲ್ಲಿ ಒಂದು ಕನ್‌ಸೆಷನ್ ರೇಟಿನಲ್ಲಿ ಅವರಿಗೆ ಯಾವ ರೀತಿ ಕೊಟ್ಟರೋ ಆ ರೀತಿ ಕೊಡಿರಿ. ಈ ಒಂದು ಭವ್ಯವಾದಂಥ ಕೈಗಾರಿಕೆ ಏನು ಇದೆ ಅದು ಮುಂದಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಅದಕ್ಕೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಕೂಡಲೇ ಗಮನ ಕೊಟ್ಟು ಆರ್ಡರ್ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಷಯದಲ್ಲಿ ಹೇಳುವುದಾದರೆ ಮಾನ್ಯ ಚೆನ್ನಬಸಪ್ಪನವರು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು ಆದರೆ ನಮ್ಮಲ್ಲಿ ಇರಿಗೇಷನ್ ಟ್ರಾಕ್ಟರ್ ರೋಡ್ಸ್ ಅಂತ ಇದೆ ಅಂದರೆ ಗದ್ದೆಗಳಿಗೆ ಗೊಬ್ಬರವನ್ನು ತೆಗೆದುಕೊಂಡು ಹೋಗತಕ್ಕಂಥಾದ್ದು, ದವಸ ಧಾನ್ಯಗಳನ್ನು ಸಾಗಿಸತಕ್ಕಂಥಾದ್ದು, ಮತ್ತು ಇಂಟಿರಿಯರ್ ಗದ್ದೆಗಳಿಗೆ ಹೋಗತಕ್ಕಂಥಾದ್ದು ರಸ್ತೆಗಳು. ಈ ರಸ್ತೆಗಳು ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಈಗಲೂ ಇದೆ ಕೇಳಿದರೆ ಅದಕ್ಕೆ ಗ್ರಾಂಟ್ ಇಲ್ಲ ಅದನ್ನು ಇಂಪ್ರೂ ಮಾಡುವುದಕ್ಕೆ ಗ್ರಾಂಟ್ ಇಲ್ಲ ಎಂದು ಹೇಳುತ್ತಾರೆ ಆದುದರಿಂದ ಈಗಲಾದರೂ ಕೂಡ ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು ಎಂದು ನಾನು ಮಾನ್ಯ ಅರ್ಥ ಮಂತ್ರಿಗಳಿಗೆ ತಿಳಿಸುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಯಾವ ಕೆಲಸ ಮಾಡಿದರೂ ಅದು ಉತ್ತಮವಾಗಿರಬೇಕು. ನಾನು ಇದ್ದಾಗ ಸುಮಾರು 400 ಜೂನಿಯರ್ ಕಾಲೇಜುಗಳನ್ನು ಪ್ರತಿ ಹಳ್ಳಿ ಹಳ್ಳಿಯಲ್ಲೂ ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಓದುವುದಕ್ಕೆ ಅವಕಾಶ ಇಲ್ಲದೆ ಇರುವ ಕಡೆಗಳಲ್ಲಿ ಅದನ್ನು ಪ್ರಾರಂಭ ಮಾಡಿದೆವು. ಅಂದರೆ ಸರ್ಕಾರ ಆ ಕೆಲಸ ಮಾಡಿತು. ಹಾಗೆ ಪ್ರಾರಂಭ ಮಾಡಿದರ ಉದ್ದೇಶ ಏನೆಂದರೆ ಅಲ್ಲಲ್ಲಿ ಅವರಿಗೆ ವಕೇಷನಲ್ ಟ್ರೈನಿಂಗ್ ಕೋರ್ಸ್ ಕೊಡಬೇಕು ಅಂತ. ಅದು ಯಾವ ರೀತಿ ಇರಬೇಕು ಎಂದರೆ ಪಿ. ಯು, ಸಿ. ಒಂದನೇ ತರಗತಿ ಮತು ಎರಡನೇ ತರಗತಿಯಲ್ಲಿ ಆ ವಿದ್ಯಾರ್ಥಿಗಳಿಗೆ ಟೈಪ್‌ರೈಟಿಂಗ್ ಅಂಡ್ ಷಾರ್ಟ್ ಹ್ಯಾಂಡ್ ಇರಬೇಕು, ಅಗ್ರಿಕಲ್ಚರ್ ಇರಬೇಕು ಅಥವಾ ಯಾವುದಾದರೂ ಮಿಷನಿಸ್ಟ್ ಕೋರ್ಸ್ ಇರ

ಬೇಕು ಅಥವಾ ಯಾವುದಾದರೂ ಕಸಬುಗಳಲ್ಲಿ ತರಬೇತು ಅಗುವಂಥ ಶಿಕ್ಷಣ ಇರಬೇಕು ಅಂತ ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿದುದರ ಉದ್ದೇಶ. ಅಂದರೆ ಆ ವಿದ್ಯಾರ್ಥಿ ಆ ಶಿಕ್ಷಣ ದೊರೆತ ಮೇಲೆ ತನ್ನ ಕಾಲಿನ ಮೇಲೆ ನಿಂತುಕೊಂಡು ತನ್ನ ಜೀವನವನ್ನು ಮಾಡತಕ್ಕಂಥ ಒಂದು ವೊಕೇಷನಲ್ ಟ್ರೈನಿಂಗ್ ಇರಬೇಕು ಅಂತ ಮಾಡಿದೆವು. ಹಾಗೆಯೇ ಯೂನಿವರ್ಸಿಟಿಯಲ್ಲೂ ಇಂಥಾ ಶಿಕ್ಷಣ ಕೊಟ್ಟರೆ ಬಹುಶಃ ನಮ್ಮ ಈಗಿನ ಯುವಕರಿಗೆ ಇಂಥಾ ವಿದ್ಯಾಭ್ಯಾಸ ಕೊಟ್ಟರೆ ಹೆಚ್ಚು ಹುಡುಗರು ಕಾಲೇಜಿನಲ್ಲಿ ಹೋಗಿ ವಿದ್ಯಾಭ್ಯಾಸ ಮಾಡುವುದಕ್ಕೆ ಅಪೇಕ್ಷೆಪಡುವುದಿಲ್ಲ. ಕಾಲೇಜಿಗೆ ಹೋಗತಕ್ಕಂಥಾವರು ಯಾರು ಎಂದರೆ ತುಂಬಾ ಮೆರಿಟ್ ಇದ್ದಂಥಾವರು, ಮತ್ತು ಒಂದು ಹೈಸ್ಟ್ಯಾಂಡರ್ಡ್‌ನಲ್ಲಿ ಪಾಸು ಮಾಡಬೇಕು ಎನ್ನತಕ್ಕಂಥಾವರು, ರ್ಯಾಂಕ್‌ನಲ್ಲಿ ತೇರ್ಗಡೆಯಾಗಬೇಕು ಎನ್ನತಕ್ಕಂಥಾವರು ಹೋಗುತ್ತಾರೆ ಈಗ ಕೊಡತಕ್ಕಂಥಾ ಶಿಕ್ಷಣ ಎಲ್ಲರೂ ಕೂಡ ಒಂದು ಜೀವನಕ್ಕೆ ಅವಕಾಶವಾಗಲಿ ಎನ್ನತಕ್ಕಂಥ ಉದ್ದೇಶ ಹೊಂದಿರುವುದರಿಂದ ಅದಕ್ಕೆ ಅನುಕೂಲವಾಗತಕ್ಕಂಥ ಶಿಕ್ಷಣ ಕೊಡಬೇಕು. ಈಗ ಯಾವುದಾದರೂ ಒಂದು ಗುಮಾಸ್ತನ ಕೆಲಸಕ್ಕೆ ಹೋಗಬೇಕಾದರೆ ಅದಕ್ಕೇನೂ ಬಿ ಎ ಪರೀಕ್ಷೆ ಮಾಡಿಕೊಂಡು ಹೋಗಬೇಕಾಗಿಲ್ಲ. ಅದು ಅನಾವಶ್ಯಕ. ಆದುದರಿಂದ ಯಾವ ಯಾವ ಕೆಲಸಕ್ಕೆ ಎಷ್ಟುಮಟ್ಟಿನ ವಿದ್ಯಾಭ್ಯಾಸ ಬೇಕೋ ಅಷ್ಟುಮಟ್ಟಿಗೆ ವಿದ್ಯಾಭ್ಯಾಸ ಕೊಡುವುದನ್ನು ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಎಜುಕೇಷನ್ ಪ್ರಾಬ್ಲಮ್ ಅನ್ನುವುದು ಒಂದು ದೊಡ್ಡ ಪ್ರಾಬ್ಲಮ್. ಎಲ್ಲವನ್ನೂ ಸರ್ಕಾರವೇ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಖಾಸಗೀ ಇನ್ಸ್ಟಿಟ್ಯೂಷನ್‌ಗಳ ಎಫರ್ಟ್ ಕೂಡ ಸೇರಬೇಕು. ಆದರೆ ಅದರ ಮೇಲೆ ಸರ್ಕಾರದವರು ಒಂದು ಕಂಟ್ರೋಲ್ ಇಟ್ಟುಕೊಳ್ಳಬೇಕು. ಈ ವಿದ್ಯಾಭ್ಯಾಸದ ಬಗ್ಗೆ ಹಿಂದೆ ಒಂದು ಯೋಜನೆ ಇತ್ತು. ಅದಕ್ಕೆ ಅರ್ಥ ಮಂತ್ರಿಗಳೂ ಒಪ್ಪಿದ್ದರು, ಮತ್ತು ಮುಖ್ಯಮಂತ್ರಿಗಳೂ ಕೂಡ ಒಪ್ಪಿದ್ದರು. ಸೈನ್ಸ್‌ನ್ನು ಅರಿತಿರತಕ್ಕಂಥ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಆಗಬೇಕು ಎನ್ನುವ ಉದ್ದೇಶದಿಂದ ಈ ಯೋಜನೆ ತಯಾರಾಗಿತ್ತು. ಸೈನ್ಸ್ ಮತ್ತು ಟೆಕ್ನಾಲಜಿ ಅಂಡರ್‌ಸ್ಟ್ಯಾಂಡಿಂಗ್ ಅರ್ಥಮಾಡಿಕೊಳ್ಳತಕ್ಕಂಥ ಹುಡುಗರಿಗೆ ಅನುಕೂಲವಾಗುವಂತೆ ದೊಡ್ಡ ದೊಡ್ಡವರು ಸೇರಿ ಅದನ್ನು ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡಿ ಸುಲಭದಲ್ಲಿ ಅರ್ಥವಾಗುವ ರೀತಿಯಲ್ಲಿ ಅದನ್ನು ಪ್ರಕಟನೆ ಮಾಡಿಸಿ ಲೈಬ್ರರಿಗಳಿಗೆ ಕೊಡಬೇಕು. ಅದನ್ನು ಬಣ್ಣ ಬಣ್ಣದ ಹಾಳೆಗಳಲ್ಲಿ ಪ್ರಿಂಟ್ ಮಾಡಿಸಿ ಲೈಬ್ರರಿಗಳಿಗೆ ಹಂಚಿದರೆ ಅದರಿಂದ ಆ ಹುಡುಗರು ತಮ್ಮ ಸಬ್ಜೆಕ್ಟನ್ನು ರಿಕೂಪ್ ಮಾಡಿಕೊಂಡು ಮುಂದುವರೆಯುವುದಕ್ಕೆ ಅನುಕೂಲವಾಗುತ್ತದೆ: ಎನ್ನುವ ದೃಷ್ಟಿಯಿಂದ ಆ ಯೋಜನೆ ತಯಾರಾಗಿತ್ತು. ಅದಕ್ಕೆ

(ಶ್ರೀ ಎ. ಆರ್. ಬದರೀನಾರಾಯಣ್)

ಆರ್ಡರ್ ಕೂಡ ಆಗಿತ್ತು. ಆದರೆ ಏನು ಕಾರಣವೋ ಅದು ಜಾರಿಗೆ ಬರಲಿಲ್ಲ. ಈಗಲಾದರೂ ಕೂಡ ಅದನ್ನು ಬೇಗನೆ ಜಾರಿ ಮಾಡಬೇಕು ಎಂದು ತಿಳಿಸುತ್ತೇನೆ.

ಇನ್ನು ಯೂತ್ ಸರ್ವಿಸಸ್ ಬಗ್ಗೆ ಹೇಳುವುದಾದರೆ we have diverted the youth from the otherwise destructive activities to constructive activities. ಡೈರೆಕ್ಟರ್ ಆಫ್ ಯೂತ್‌ಸರ್ವಿಸಸ್ ಏನು ಮಾಡಬೇಕು ಎಂದರೆ ಯೂತ್‌ಗೆ ಬೇಕಾಗಿರತಕ್ಕಂಥ ಅಂಡ್‌ಲಿಟರರಿ ಎಜುಕೇಷನ್ ಟ್ರೆನಿಂಗ್ ಮತ್ತು ಸ್ಪೋರ್ಟ್ಸ್ ಅಂಡ್ ಹಿಸ್ಟ್ರಿಯೂನಿಕ್ ಟಾಲೆಂಟ್ಸ್ ಯೂತ್‌ಗೆ ಬೇಕಾಗಿರತಕ್ಕಂಥ ಟ್ರೈನಿಂಗ್ ಬಗ್ಗೆ ಒಂದು ಯೋಜನೆ ಮಾಡಬೇಕು.

ಇನ್ನು ಹೆಲ್ತ್‌ನಲ್ಲಿ ಹೇಳುವುದಾದರೆ ಬೇಕಾದಷ್ಟು ಕೆಲಸವಾಗಿದೆ. ಅದರಲ್ಲಿ ಕ್ವಾಂಟಿಟಿ ಮಾತ್ರ ಇಂಪ್ರೂ ಆಗಿದೆ ಆದರೆ ಕ್ವಾಲಿಟಿ ಇಂಪ್ರೂ ಆಗಿಲ್ಲ. ಇದರಲ್ಲಿ ಏನಾಗಿದೆ ಎಂದರೆ ಹೆಂಗಸರಾಗಲಿ ಗಂಡಸರಾಗಲಿ ಇದರಲ್ಲಿ ಆಸಕ್ತಿ ಇರತಕ್ಕಂಥಾವರು ಮಾತ್ರ ಇದರಲ್ಲಿ ಆರಿಸಬೇಕು. ರಷ್ಯಾದಲ್ಲಿ ಒಂದು ಪದ್ಧತಿ ಇದೆ; ಎಂದು ನಾನು ಕೇಳಿದ್ದೇನೆ. ಅದರಲ್ಲಿ ನರ್ಸಸ್ ಆಗಿರತಕ್ಕಂಥಾವರು ಮೇಲಾಗಲಿ ಫೀಮೇಲಾಗಲಿ ಮೆಡಿಕಲ್ ಕಾಲೇಜಿಗೆ ಸೇರಬೇಕಾದರೆ ಅವರು ಅಲ್ಲಿ 3-4 ವರ್ಷ ಕೆಲಸಮಾಡಿ ಅದರಲ್ಲಿ ಒಂದು ಫೌಂಡೇಷನ್ ತೆಗೆದುಕೊಂಡಂಥಾವರನ್ನು ಅಲ್ಲಿಯು ಮೆಡಿಕಲ್ ಕಾಲೇಜಿಗೆ ಅಡ್ಮಿಟ್ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಅಂದರೆ ಸರ್ವಿಸ್ ಮೈಂಡೆಡ್‌ನೆಸ್ ಇರತಕ್ಕಂಥಾವರು ಅಲ್ಲಿ ಸೇರಬೇಕು.

ಇನ್ನು ವಾಟರ್‌ಸಪ್ಲೈ ವಿಚಾರದಲ್ಲಿ ಹೇಳುವುದಾದರೆ ಹಳ್ಳಿಯವರಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು, ಅದಕ್ಕೆ ಹಣ ಇನ್ನೂ ಸಾಲದು ಆ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದನ್ನು ನಾನು ಹೇಳಿದ್ದೇನೆ.

ಇನ್ನು ಟ್ಯಾಕ್ಸ್ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ನನ್ನ ಮನಸ್ಸಿನಲ್ಲಿರುವುದನ್ನು ಹೇಳುತ್ತೇನೆ ಇಷ್ಟು ಶ್ರಮಪಟ್ಟು ಟ್ಯಾಕ್ಸ್ ಹಾಕತಕ್ಕಂಥ ಅವಶ್ಯಕತೆ ಇರಲಿಲ್ಲ. ಏತಕ್ಕೆಂದರೆ ಬಹಳವಾಗಿ ಸೋರಿಹೋಗತಕ್ಕಂಥ ಹಣ ಏನು ಇದೆ ಸೇಲ್ಸ್ ಟ್ಯಾಕ್ಸ್ ಬಾಬಿನಲ್ಲಾಗಲಿ ಅಥವಾ ಯಾವುದೇ ಬಾಬಿನಲ್ಲೇ ಆಗಲಿ ಏನು ಇದೆ ಅದನ್ನು ವಸೂಲ್ಮಾಡುವುದಕ್ಕೆ ಅದರಲ್ಲೇ ಕೆಲವು ಖದೀಮರಾಗಿರತಕ್ಕಂಥ ಅಧಿಕಾರಿಗಳು ಡಿಪಾರ್ಟ್‌ಮೆಂಟ್‌ಗೆ ಬರಬೇಕು. ಈ

ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕಂಥಾ ಅಧಿಕಾರಿಯನ್ನು ನೋಡಿದ್ದೇನೆ. ಆದರೆ ನಮ್ಮಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಳ್ಳೆಯ ಅಧಿಕಾರಿಯನ್ನು ಒಳ್ಳೆಯ ಕೀ ಪೊಸಿಷನ್‌ನಲ್ಲಿ ದೊಡ್ಡ ದೊಡ್ಡ ಜಾಗದಲ್ಲಿ ಇಲ್ಲ. ಹಾನೆಸ್ಟಿ, ಇಂಟೆಗ್ರಿಟಿ ಮತ್ತು ಡೆಡಿಕೇಷನ್ ಇರತಕ್ಕಂಥಾವರನ್ನು ನೇಮಕ ಮಾಡಬೇಕು. ಈ ಜಾಗಕ್ಕೆ ಯಾರು ಬರಬೇಕೋ ಅವರಿಗೆ ಬರುವುದಕ್ಕೆ ಅವಕಾಶ ಕೊಡಬಾರದು. ಆ ರೀತಿ ಮಾಡಿದರೆ ಸೋರಿ ಹೋಗತಕ್ಕಂಥ ಹಣವನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ ಬಹುಶ: ಹೆಚ್ಚು ಹಣ ಬರಬಹುದು ಎಂದು ನನಗೆ ಕಾಣುತ್ತದೆ. ಇದನ್ನು ಯೋಚನೆ ಮಾಡತಕ್ಕಂಥಾದ್ದು ತಮಗೆ ಸೇರಿದೆ. ಇದರಲ್ಲಿ ಎಣ್ಣೆ ಹಾಗೂ ಅರಕಾ ನಟ್ಸ್ ಇತ್ಯಾದಿ ಸಣ್ಣ ಸಣ್ಣ ಪದಾರ್ಥಗಳ ಮೇಲೆ ಟ್ಯಾಕ್ಸು ಹಾಕಿದ್ದಾರೆ. ಇದು ಸಾಮಾನ್ಯ ಜನಗಳು ಉಪಯೋಗಿಸತಕ್ಕದ್ದು ಆಗಿರುವುದರಿಂದ ಇದಕ್ಕೆ ಸರಕಾರ ವಿನಾಯತಿ ಕೊಡಬಹುದು. ಹೆಚ್ಚು ಶಕ್ತಿ ಇರುವವರೇನೋ ಹೇಗಾದರೂ ಕೊಟ್ಟು ಕೊಂಡುಕೊಳ್ಳುತ್ತಾರೆ. ಆದರೆ ಶಕ್ತಿ ಇಲ್ಲದವರಿಗೆ ಇದನ್ನು ಕೊಳ್ಳಲು ಕಷ್ಟವಾಗುತ್ತದೆ. ಆದುದರಿಂದ ಇದರ ಬಗ್ಗೆ ಸರಕಾರ ವಿಚಾರ ಮಾಡಬೇಕು. ಹಾಗೇನೇ ಅಗ್ರಿಕಲ್‌ಚರ್ ಇನ್‌ಕಂ ಟ್ಯಾಕ್ಸು ಹಾಕಬೇಕೆಂದು ವೆಲ್ತಿ ಫಾರ್ಮರ್ಸ್ ಮೇಲೆ ಹಾಕಿದ್ದಾರೆ. ಆದರೆ ಎಲ್ಲರೂ ಇದರ ಲೆಕ್ಕ ಪತ್ರಗಳನ್ನು ಇಡಬೇಕೆಂದರೆ ಬಹು ಕಷ್ಟವಾಗುತ್ತದೆ. ತಿಳುವಳಿಕೆ ಇರುವವರು ಲೆಕ್ಕಗಳನ್ನು ಇಡುತ್ತಾರೆ. ಆದರೆ ತಿಳುವಳಿಕೆ ಇಲ್ಲದವರು ಹಳ್ಳಿಗಳಲ್ಲಿರುವವರು ಇನ್‌ಕಂ ಟ್ಯಾಕ್ಸು ಆಫೀಸರುಗಳ ಮರೆ ಹೋಗಬೇಕಾಗುತ್ತದೆ. ಇದರ ಬಗ್ಗೆ ಫೂಲ್ ಪ್ರೂಫ್ ಆಗಿ ಯಾವ ರೀತಿ ಮಾಡಬಹುದು ಎಂದು ಸರಕಾರ ವಿಚಾರ ಮಾಡಿ ಇದನ್ನು ಬಿಗಿ ಮಾಡಬೇಕು ಮತ್ತು ಇದರಿಂದ ಸೋರಿ ಹೋಗುತ್ತಿರುವ ಹಣವನ್ನು ಸರಕಾರ ಪಡೆಯಬಹುದು. ಇದರ ಬಗ್ಗೆ ನಾನು ಒಂದು ಸಲಹೆ ಮಾಡುವುದು ಎಂದರೆ ಇನ್‌ಕಂ ಟ್ಯಾಕ್ಸ್ ಕೊಡುವಾಗ ಇಂತಿಷ್ಟು ಎಕರೆಗಳಿಗೆ ಇಷ್ಟು ಕೊಡಬೇಕೆಂದು ವಿಧಾಯಕ ಮಾಡಿದರೆ ಇವರು ಲೆಕ್ಕ ಪತ್ರಗಳನ್ನಿಡುವುದು ತಪ್ಪುತ್ತದೆ. ಸರಕಾರಕ್ಕೆ ವರಮಾನ ತರುವುದೂ ಅನುಕೂಲವಾಗುತ್ತದೆ. ಅಲ್ಲದೆ ಟ್ಯಾಕ್ಸು ವಸೂಲಿ ಮಾಡುವಾಗ ಕೆಲವರಿಂದ ದೂರುಗಳು ಬರುತ್ತವೆ. ಇಷ್ಟು ಮಾಮೂಲು ಕೊಡಬೇಕು ಎಂದು ಅಧಿಕಾರಿಗಳು ಕೇಳುತ್ತಾರೆ ಇತ್ಯಾದಿ. ಇದಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಇಲ್ಲಿ ನೇಮಕ ಮಾಡಬೇಕ. ಇಲ್ಲದೇ ಹೋದರೆ, You will place the farmers at the mercy of the officers concerned. ಆದ್ದರಿಂದ ನಿಷ್ಠೆಯಿಂದ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಹಾಕಿದರೆ ಸಾರ್ವಜನಿಕರಿಂದ ದೂರುಗಳು ಬರುವುದೂ ಕಡಿಮೆ ಯಾಗಬಹುದು. ಮತ್ತು ಸರಕಾರ ಯಾವ ಕೆಲಸ ಮಾಡಿದರೂ ಅದನ್ನು ಪೂರ್ಣವಾಗಿ ಕಾರ್ಯಗತ ಮಾಡಬೇಕು ಮತ್ತು ಆ ಕೆಲಸಗಳು ಬೇಗನೇ ಕಾರ್ಯರೂಪಕ್ಕೆ ಬರುವಂತೆ ಮಾಡಬೇಕು. ಅಂತಹ ಅಧಿಕಾರಿಗಳನ್ನು ನೇಮಕ

(ಶ್ರೀ ಎ. ಆರ್. ಬದರೀನಾರಾಯಣ್)

ಮಾಡುವ ಹೊಣೆಗಾರಿಕೆ ಸರಕಾರದ್ದು. ಇದರಿಂದ ನೂರಕ್ಕೆ ಐವತ್ತರಷ್ಟು ಕೆಟ್ಟ ಹೆಸರು ಸರಕಾರಕ್ಕೆ ಬರುವುದು ಕಡಿಮೆಯಾಗಲು ಅವಕಾಶವಾಗುತ್ತದೆ. ಅವ್ಯವಹಾರಗಳನ್ನು ನಡೆಸತಕ್ಕ ಅಧಿಕಾರಿಗಳನ್ನು ಸರಿಮಾಡಿದರೆ ಎಷ್ಟೋ ಕಡೆ ಸೋರಿ ಹೋಗುತ್ತಿರುವ ತೆರಿಗೆಗಳನ್ನು ಸರಕಾರ ಪಡೆಯಲು ಸಹಾಯವಾಗುತ್ತದೆ ನಾವು ಎಷ್ಟೋ ಕಡೆ ಕೇಳಿದ್ದೇವೆ ಕೋತಿ ತಿಂದು ಮೇಕೆ ಬಾಯಿಗೆ ಒರಸಿದಂತೆ ಕೆಲವು ಕಡೆ ಯಾರೋ ಮಾಡಿದ ತಪ್ಪಿಗೆ ಅಧಿಕಾರಿಗಳು ಸಿಕ್ಕಿ ಹಾಕಿಕೊಳ್ಳುತ್ತಾರೆ ಇದಕ್ಕೆ ಅವಕಾಶ ಕೊಡಬಾರದು. ಆಯುವ್ಯಯ ಪತ್ರದಲ್ಲಿ ನಮ್ಮ ಸರಕಾರವು ಅರ್ಥ ಮಂತ್ರಿಗಳು ಅನೇಕ ಸಲಹೆಗಳನ್ನು ತಂದಿದ್ದಾರೆ. ಇದರ ಜೊತೆಗೆ ನಮ್ಮ ಸಲಹೆಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. Men of proven ability and integrity should be placed in important places. ಇದರಲ್ಲಿ ಕೆಲವು ಸಲಹೆಗಳನ್ನಾದರೂ ಕಾರ್ಯರೂಪಕ್ಕೆ ತರುತ್ತಾರೆಂದು ಆಶಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

STATEMENT OF THE CHIEF MINISTER

re: talks held in Delhi about Cauvery Waters' dispute

SRI D. DEVARAJ URS:—Sir, after attending the meeting that was called by the Union Minister for Irrigation and Agriculture of all the Chief Ministers of the three States, namely, Karnataka, Tamilnadu and Kerala. I took some time to come before the House to make a statement on the Cauvery dispute. The House was rightly anxious to know what had happened and what Government proposes to do in this behalf because all these days after that meeting ended in a non-agreement I should say many statements have come out in the press and mostly from Tamilnadu Chief Minister giving different versions of the failure of the talk They have gone to the extent of even first placing the responsibility on Karnataka State and then on the Centre also.

Now Sir I have sought the permission of this House to place this statement of mine on behalf of the Govern-